# ಅಧ್ಯಾಯ 13

# ಉತ್ಕೃಷ್ಟವಾದ ಮಾರ್ಗ

12:31ಬಿದಲ್ಲಿ “ಉತ್ಕೃಷ್ಟವಾದ ಮಾರ್ಗ” ವನ್ನು ಸೂಚಿಸಿದ ನಂತರ, ಪೌಲನು, ಸತ್ಯವೇದದಲ್ಲಿ ಒಂದು ಅತ್ಯಂತ ಸುಂದರವಾದ ಮತ್ತು ಆಳವಾದ ಭಾಗವನ್ನು ಪ್ರಾರಂಬಿಸುತ್ತಾನೆ. ಅವನು ವಿವಿಧ ಮಹತ್ಕಾರ್ಯಗಳ ವಿಧಗಳನ್ನು ಚರ್ಚಿಸುತ್ತಿದ್ದಾನೆ. ಹೆಚ್ಚು ದೃಶ್ಯವಾದ ವರಗಳಿಗಾಗಿ ಲೌಕಿಕ-ಮನೋಭಾವದವರ ಸ್ಪರ್ಧೆ ಸಭೆಯಲ್ಲಿ ಅಡತಡೆಯನ್ನು ಉಂಟುಮಾಡಿದೆ, ಮತ್ತು ಪೌಲನು ದೇಹದ ಐಕ್ಯತೆಗಾಗಿ ಆತ್ಮೀಕ ವರಗಳ ಕೊಡುಗೆಯನ್ನು ನೀಡಬೇಕೆಂದು ಒತ್ತು ನೀಡುತ್ತಿದ್ದಾನೆ. ಒಂದು ಕ್ಷಣ ಅವನು ಕೊರಿಂಥದವರು ಪರಿಚಿತರಾಗಿರುವ ಆತ್ಮೀಕ ವರಗಳನ್ನು ಬದಿಗಿಡುತ್ತಾನೆ ಮತ್ತು ಯಾವುದೇ ರೀತಿಯ ಅಸ್ವಾಭಾವಿಕವಾದ ಆತ್ಮನ ಆಶೀರ್ವಾದಗಳ ಅವಶ್ಯಕತೆಯಿಲ್ಲದೇ ಇರುವ ಪ್ರೀತಿಯ ಕುರಿತು ಮಾತನಾಡುತ್ತಾನೆ.

ಪ್ರೀತಿಯ ಕುರಿತು ಆತನು ಒಂದು ಕ್ಷಣದಲ್ಲಿ ಬಂದು ಹೋಗುವ ಕೇವಲ ಆನಂದಕರವಾದ ಭಾವನೆ ಎಂದು ಬರೆಯುವದಿಲ್ಲ. ಇದು ನೆಲೆಯಾಗಿರುವ ಗುಣಲಕ್ಷಣದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಕ್ರಿಯೆಯಲ್ಲಿ ಮುಕ್ತಾಯವಾಗುತ್ತದೆ. ಕ್ರೈಸ್ತರ ಜೀವಿತದಲ್ಲಿ ಪ್ರೀತಿಯ ಶ್ರೇಷ್ಠತೆಯ ಕುರಿತು ಸತ್ಯವೇದವು ನೀಡುವ ಒಂದು ಶ್ರೇಷ್ಠವಾದ ಹೇಳಿಕೆಯಾಗಿದೆ ಇದು ಪೌಲನ, ವೈವಿಧ್ಯತೆಯಲ್ಲಿ ಐಕ್ಯತೆಯ ಚರ್ಚೆಯನ್ನು ವಿಷಯಾಂತರಿಸುವದಲ್ಲ. ಸಮಾಧಾನ ಮತ್ತು ಪ್ರೀತಿ ಸಭೆಯನ್ನು ಆಳುವಾಗ ಇದರ ಪರಿಣಾಮ ಆಳವಾಗಿದೆ ಎಂಬ ಹೇಳಿಕೆಯನ್ನು ನೀಡುವಾಗ. ವಯಕ್ತಿಕ ಕ್ರೈಸ್ತರು ಒಬ್ಬರನ್ನೊಬ್ಬರು ಪ್ರೀತಿಸುವದು ಮತ್ತು ಬೆಂಬಲಿಸುವದನ್ನು ಮಾಡುವಾಗ ಪ್ರತಿಯೊಬ್ಬರ ವರಗಳನ್ನು ಹೆಚ್ಚಿಸಲ್ಪಡುತ್ತವೆ ಎಂಬುದು ಹೆಚ್ಚು ನಿಖರವಾಗಿದೆ. ವಯಕ್ತಿಕವಾಗಿ ಕ್ರೈಸ್ತರು ತಮ್ಮ ಸಹ ವಿಶ್ವಾಸಿಗಳಿಂದ ಕೊಡುವದು ಮತ್ತು ತೆಗೆದುಕೊಳ್ಳುವದರಲ್ಲಿ ಬೆಂಬಲವನ್ನು ಹೊಂದಿಕೊಳ್ಳುವಾಗ ಸಂಪೂರ್ಣತೆಗೆ ಹೆಚ್ಚಾಗಿ ಕೊಡುಗೆಯನ್ನು ನೀಡುತ್ತಾರೆ, ಆದರೆ ಸಂಪೂರ್ಣತೆಯು ಎಂದಿಗೂ ಒಟ್ಟಾರೆ ಅಂಗಗಳಿಗಿಂತ ದೊಡ್ಡದಲ್ಲ.

ಪ್ರೀತಿಯ ಶ್ರೇಷ್ಠತೆಗೆ ಪೌಲನ ಈ ಸಾಕ್ಷಿಯು, ವೇದವಾಕ್ಯದುದ್ದಕ್ಕೂ ಬಹಳ ಬೆಂಬಲವನ್ನು ಹೊಂದಿಕೊಂಡಿದೆ. ಮೋಶೆಯ ಧರ್ಮಶಾಸ್ತ್ರದಲ್ಲಿ ಅತ್ಯಂತ ಶ್ರೇಷ್ಠವಾದ ಆಜ್ಞೆಯನ್ನು ಗುರುತಿಸಲು ಹೇಳುವಾಗ, ಯೇಸು ತಕ್ಷಣದ ಪ್ರತಿಕ್ರಿಯೆಯನ್ನು ನೀಡುತ್ತಾನೆ. ಯೆಹೂದ್ಯ ಮಧ್ಯಕಾಲೀನ ಪಂಡಿತ Jewish (1135-1204) ಧರ್ಮಶಾಸ್ತ್ರ[1]ರಲ್ಲಿ 613 ಆಜ್ಞೆಗಳನ್ನು ಗುರುತಿಸುತ್ತಾನೆ; ಅವುಗಳನ್ನು ಯೇಸು ಎರಡರಲ್ಲಿ ಸಂಕ್ಷಿಪ್ತಗೊಳಿಸುತ್ತಾನೆ:

ಮೊಟ್ಟ ಮೊದಲನೆಯದು, “ಇಸ್ರಾಯೇಲ್ ಜನವೇ ಕೇಳು, ನಮ್ಮ ದೇವರಾದ ಕರ್ತನು

ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬದೇ ಮೊದಲನೆಯ ಆಜ್ಞೆ" ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ ಎರಡನೆಯ ಆಜ್ಞೆ (ಮಾರ್ಕ 12:29-31).

ಪ್ರೀತಿಯು ಕ್ರೈಸ್ತರನ್ನು ದೇವರ ಕೃಪೆ ಮತ್ತು ಕುರಿಮರಿಯ ರಕ್ತದ ಮೂಲಕ ಕೊಂಡುಕೊಂಡ ಎಲ್ಲರಿಗೂ ಲಭ್ಯವಾಗಿರುವ ಪಾಪಗಳಿಂದ ರಕ್ಷಣೆಯನ್ನು ಇತರರಿಗೆ ತಿಳಿಯಪಡಿಸಲು ಪ್ರೇರೇಪಿಸುವ ಬಲವಾದ ಶಕ್ತಿಯಾಗಿದೆ. "ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ," ಪೌಲನು ಕೊರಿಂಥದವರಿಗೆ ನಂತರ ಬರೆದ ಪತ್ರದಲ್ಲಿ ಬರೆಯುತ್ತಾನೆ, "ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ ಎಲ್ಲರೂ ಸತ್ತಂತಾಯಿತೆಂದು ನಿಶ್ಚಯಿಸಿಕೊಂಡವು" (2 ಕೊರಿಂಥ 5:14; NRSV).

"ಪ್ರೀತಿ," "ನಂಬಿಕೆ," ಮತ್ತು "ಕೃಪೆ" ಎಂಬ ಪದಗಳು ಯಾರು ಯೇಸುವನ್ನು ಕ್ರಿಸ್ತನು ಎಂದು ಅರಿಕೆ ಮಾಡುತ್ತಾರೋ ಅವರಿಗೆ ಮೂಲ ತತ್ವಗಳಾಗಿವೆ. ರಾಜಕೀಯ ಕ್ಷೇತ್ರದಲ್ಲಿ, "ದೇಶಪ್ರೇಮ," "ಸ್ವಾತಂತ್ರ," ಮತ್ತು "ಕುಟುಂಬ" ಮುಖ್ಯ ಪದಗಳಾಗಿರುವಂತೆ. ಇಂಥಹ ಪದಗಳೊಂದಿಗೆ ಇರುವ ಸಮಸ್ಯೆ ಅವು ಎಷ್ಟು ಮೃದುವಾಗಿರುತ್ತವೆಂದರೆ ಅವುಗಳಿಗೆ ಸ್ಥಿರವಾದ ಅರ್ಥವಿರುವದಿಲ್ಲ. ಒಂದು ಪದವು ಬಹಳವಾಗಿ ಸುತ್ತಿಕೊಳ್ಳುವಾಗ, ಅದು ಯಾವುದೇ ಅರ್ಥವನ್ನು ನೀಡುವದಿಲ್ಲ.

ಅದರ ಧೀರ್ಘವಾದ ಇತಿಹಾಸದಲ್ಲಿ, ಕ್ರಿಸ್ತನ ಸಭೆಯು ಇಂಥಹ ವಿಚಾರಗಳನ್ನು ವ್ಯಾಖ್ಯಾನಿಸುವದರಲ್ಲಿ ಉದಾಹರಣೆಗೆ, ಪ್ರೀತಿ, ನಂಬಿಕೆ ಮತ್ತು ನಿರೀಕ್ಷೆ ಈ ಪದಗಳಲ್ಲಿ ಮುಳುಗಿಹೋಗಿವೆ. ಈ ಪದಗಳನ್ನು ವ್ಯಾಖ್ಯಾನಿಸುವದೆಂದರೆ ಅದನ್ನು ಮಿತಿಗೊಳಿಸಿದಂತೆ ಮತ್ತು ಈ ಪದದಿಂದ ಎಲ್ಲವನ್ನೂ ತಿಳಿದಿದ್ದೇವೆ ಎಂದಾಗುವದಿಲ್ಲ. ತತ್ವಗಳ ಕುರಿತು ತಿಳುವಳಿಕೆಯಿಲ್ಲದಿದ್ದರೆ ಯಾರೊಬ್ಬರೂ ಆ ತತ್ವಗಳ ಮೂಲಕ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಿಲ್ಲ. ಇಬ್ರಿಯ ಪತ್ರಿಕೆಯ ಲೇಖಕನು "ನಂಬಿಕೆಯನ್ನು" ಪದಗಳಲ್ಲಿ ಇರಿಸಲು ಉದಾಹರಣೆಗಳನ್ನು ಉಪಯೋಗಿಸುತ್ತಾನೆ (ಇಬ್ರಿಯ 11). "ಪ್ರೀತಿ" ಯನ್ನು ಅಮೂರ್ತವಾದ ಹಂತದಿಂದ ಸ್ಥಿರವಾದ ನಡತೆಯ ಕ್ಷೇತ್ರಕ್ಕೆ ಒಯ್ಯದಿದ್ದಕ್ಕಾಗಿ ಕ್ರೈಸ್ತರು ಪೌಲನಿಗೆ ಕೃತಜ್ಞರಾಗಿರಬೇಕು.

## ಪ್ರೀತಿಯ ಶ್ರೇಷ್ಠತೆ (13:1-3)

**[1]ನಾನು ಮನುಷ್ಯರ ಭಾಷೆಗಳನ್ನೂ ದೇವದೂತರ ಭಾಷೆಗಳನ್ನೂ ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ. [2]ನನಗೆ ಪ್ರವಾದನವರವಿದ್ದರೂ ಎಲ್ಲಾ ರಹಸ್ಯಗಳೂ ಸಕಲ ವಿಧವಾದ ವಿದ್ಯೆಯೂ ತಿಳಿದರೂ, ಬೆಟ್ಟಗಳನ್ನು ತೆಗೆದಿಡುವದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ ನಾನು ಪ್ರೀತಿಯಿಲ್ಲವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ. [3]ನನಗಿರುದೆಲ್ಲವನ್ನು ಅನ್ನದಾನ ಮಾಡಿದರೂ ನನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವದಿಲ.**

ಪೌಲನ ಓದುಗರಿಗೆ ಆತ್ಮನು ವಿವಿಧ ವರಗಳನ್ನು ನೀಡಿದ್ದಾನೆ ಎಂದು ಹೇಳುತ್ತಾನೆ; ಆದರೆ ಅಪೊಸ್ತಲನು, ಪ್ರೀತಿಯಿಲ್ಲದಿದ್ದರೆ ಇವು ಕೇವಲ ಸದ್ದಾಗಿವೆ ಎಂದು ಹೇಳುತ್ತಾನೆ (13:1). ಪೌಲನು ಕೊರಿಂಥದ ವಿಶ್ವಾಸಿಗಳ ಮೇಲೆ ತನ್ನ ಕೈಯನ್ನು ಇರಿಸಿದ್ದನೆಂದು ಮತ್ತು ಆತ್ಮನು ಅವರಿಗೆ ಅಸಾಮಾನ್ಯವಾದ ಆತ್ಮೀಕ ವರಗಳ ಬಲವನ್ನು ನೀಡಿದ್ದನೆಂದು ಉಹಿಸಬಹುದು. ಅಪೊಸ್ತಲರ ಕಛೇರಿ ಅಸಾಮಾನ್ಯವಾದ ವರಗಳನ್ನು ನ್ಯಾಯಕತ್ವದ ಸಾಮರ್ಥ್ಯವನ್ನು ಹೊಂದಿದ ಕ್ರೈಸ್ತರಿಗೆ ನಿವೇದಿಸುವ ಜವಾಬ್ದಾರಿಯನ್ನೂ ಒಳಗೊಂಡಿತ್ತು ಮತ್ತು ಹಸ್ತವನ್ನು ಇಡುವದು ಇಂಥಹ ನಿವೇದನೆಗೆ ಹೊರಗಿನ ತೋರಿಕೆಯ ಸಂಕೇತವಾಗಿತ್ತು (ಅ.ಕೃ. 8:14-17; ನೋಡಿರಿ 2 ಕೊರಿಂಥ 12:12). ಅವರು ತಾವು ಆಯ್ದುಕೊಂಡ ಹಾಗೆ ತಮ್ಮ ಬಲವನ್ನು ಪ್ರಯೋಗಿಸಲು ಶಕ್ತರಾಗಿದ್ದರಿಂದ, ಸಹಜವಾಗಿ, ಕೆಲವು ಕ್ರೈಸ್ತರು ತಮ್ಮ ಸ್ವಂತ ಪ್ರಯೋಜನಾರ್ಥವಾಗಿ ಉಪಯೋಗಿಸುತ್ತಿದ್ದರು. ಅನ್ಯಭಾಷೆಯನ್ನು ಮಾತಾಡುವ ವರವು ವಿಶೇಷವಾದ ಪರಿಗಣನೆಯನ್ನು ಹೊಂದಿತ್ತು.

ಅನ್ಯಭಾಷೆಗಳನ್ನು ಮಾತಾಡುವದರ ಕುರಿತು ಪೌಲನ ಪತ್ರಗಳಲ್ಲಿ ಕೊರಿಂಥದ ವರನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಚರ್ಚಿಸಿಲ್ಲ. ಅವುಗಳನ್ನು ಅಪೊಸ್ತಲರ ಕೃತ್ಯದಲ್ಲಿ ಮೂರು ಬಾರಿ ಉಲ್ಲೇಖಿಸಲಾಗಿದೆ (2:4-8; 10:46; 19:6). ಕ್ರೈಸ್ತ ಆಶೀರ್ವಾದಗಳ ಇತರ ಪಟ್ಟಿಗಳಲ್ಲಿ ಎಲ್ಲಿಯೂ ಅನ್ಯಭಾಷೆಯನ್ನು ಮಾತಾಡುವದರ ಕುರಿತು ಬರೆಯಲ್ಪಟ್ಟಿಲ್ಲ (ರೋಮಾ 12:4-8; ಎಫೆಸ 4:11-13; 1 ಪೇತ್ರ 4:10, 11). ಹೊಸ ಒಡಂಬಡಿಕೆಯಲ್ಲಿ ಅನ್ಯಭಾಷೆಯಲ್ಲಿ ಮಾತಾಡುವದು ವಿರಳವಾಗಿದೆ. ಕೆಲವರು "ಅನ್ಯ ಭಾಷೆ" ಯನ್ನು ಮರುವ್ಯಾಖ್ಯಾನಿಸಲು ಬಯಸುತ್ತಾರೆ ಮತ್ತು ಈ ವರವನ್ನು ಭಾವನಾತ್ಮಕವಾಗಿ ಎಳೆಯಲ್ಪಟ್ಟ ತೊದಲು ನುಡಿಗೆ ಸಮಾನವಾಗಿಸುತ್ತಾರೆ ಇದನ್ನು ಅವರು "ದೈವೀಕ ಉಚ್ಚಾರಣೆ" ಎನ್ನುತ್ತಾರೆ. ಅವರು ಅನ್ಯಭಾಷೆಯನ್ನು ಮಾತನಾಡುವದನ್ನು, ಕೊನೆಯದಾಗಿ ಸಮುದಾಯ ಆರಾಧನೆಯ ಅನುಭವದ ಹಂತಕ್ಕೆ ಸ್ಥಳಾಂತರಿಸುತ್ತಾರೆ. ಈ ವಿಧದ ಅನ್ಯಭಾಷೆಯನ್ನು ಮಾತಾಡುವದಕ್ಕೆ ಹೊಸ ಒಡಂಬಡಿಕೆಯಲ್ಲಿ ಯಾವುದೇ ರೀತಿಯ ಸತ್ಯವೇದದ ಆಧಾರವಿಲ್ಲ.

ಕೊರಿಂಥದ ಸಭೆಯಲ್ಲಿ ಅಸಾಮಾನ್ಯವಾದ ಆಶೀರ್ವಾದದಿಂದಾಗಿ ಕೆಲವರು ಸಾಮಾನ್ಯ ವಿಧದಲ್ಲಿ ತಾವು ಕಲಿಯದಿರುವ ಭಾಷೆಗಳನ್ನು ಮಾತಾಡುತ್ತಿದ್ದರು. ಗ್ರೀಕೋ-ರೋಮನ್ ಲೋಕದಲ್ಲಿ ಮಹತ್ಕಾರ್ಯಗಳು ಸಂಭವಿಸುವದು ವಿರಳವಾಗಿತ್ತು, ಆದರೆ ಪೌಲನು ತನ್ನ ನಡೆತೆ ಮತ್ತು ಕ್ರೈಸ್ತರ ನಡತೆಯಲ್ಲಿ ವಿಗ್ರಹಾರಾಧಕರ ಸಮಾಜದಲ್ಲಿ ರೂಡಿಯಲ್ಲಿರುವ ಯಾವುದಾದರೂ ಹೋಲಿಕೆಯಿದೆಯೋ ಎಂದು ಎಚ್ಚರಿಕೆಯಿಂದ ಬೇರ್ಪಡಿಸುವದರಲ್ಲಿ ಎಚ್ಚರಿಕೆ ವಹಿಸುತ್ತಿದ್ದನು ಅವನ ಮತ್ತು ಸಮಾನ್ಯವಾಗಿ ಗ್ರೀಕ್ ಮಾರುಕಟ್ಟೆಯ ಸ್ಥಳದಲ್ಲಿ ಕಂಡುಬರುತ್ತಿದ್ದ ಸಂಚಾರಿ ತತ್ವಜ್ಞಾನಿಗಳ ಮಧ್ಯದಲ್ಲಿ ಹೋಲಿಕೆಯನ್ನು ಕಂಡಿರಬಹುದಿದ್ದಾಗ್ಯೂ, ಅಪೋಸ್ತಲನು ತಾನು ಇಂಥಹ ವೇಷಧಾರಿ ಗುಣಲಕ್ಷಣವನ್ನು ಹೊಂದಿದವನಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾನೆ (1 ಕೊರಿಂಥ 9:15; 2 ಕೊರಿಂಥ 12:13, 14; 1 ಥೆಸಲೋನಿಕ 2:9). ಒಂದು ರೀತಿಯಲ್ಲಿ ಭಾವನಾತ್ಮಕವಾಗಿ ಮನವೊಲಿಸಿದ ಯಾಂತ್ರಿಕವಾದ, ಅರ್ಥಹೀನ ಹರಟೆ ಕೆಲವು ಗ್ರೀಕ್ ಆರಾಧನೆಯ ಲಕ್ಷಣವಾಗಿದ್ದವು. ಕೆಲವರು ಇಂಥಹ ಆರಾಧನೆಯ ಪದ್ಧತಿಯನ್ನು ಕೊರಿಂಥದವರಲ್ಲಿ

ಅನ್ಯಭಾಷೆಯನ್ನು ಮಾತಾಡುವವರೊಂದಿಗೆ ಹೋಲಿಸುತ್ತಿದ್ದರು.2 ಪೌಲನು ಗ್ರೀಕ್ ನಲ್ಲಿರುವ ಸಂಮೋಹಕ ಪ್ರವಾದನೆಯ ಉಚ್ಚಾರಣೆಯನ್ನು ಅನ್ಯಭಾಷೆಯನ್ನು ಮಾತಾಡುವ ವರವನ್ನು ಹೊಂದಿದ ಕ್ರೈಸ್ತರು ಮಾತಾಡುವ ಭಾಷೆಯನ್ನು ವಿಧದಲ್ಲಿ ಮತ್ತು ಕಾರ್ಯ ನಿರ್ವಹಣೆಯಲ್ಲಿ ವಿಭಿನ್ನವಾಗಿರುವದನ್ನು ಗುರುತಿಸಿದನು.

ಅನ್ಯಭಾಷೆಯನ್ನು ಮಾತಾಡುವದಕ್ಕೆ ವ್ಯತ್ಯಾಸವಾಗಿ, ಗ್ರೀಕ್ ಪದ ἀγάπη (*agapē*, "love") ಸಭೆಯಲ್ಲಿ ಬೆಳೆದ ಕಲ್ಪನೆಯನ್ನು ಪ್ರತಿನಿಧಿಸುತ್ತದೆ ಮತ್ತು ಅದು ಮೊದಲನೆಯ ಶತಮಾನದ ಗ್ರೀಕೋ-ರೋಮನ್ ಲೋಕದಲ್ಲಿ ಸಮಾನತೆಯನ್ನು ಹೊಂದಿರಲಿಲ್ಲ. ಒಬ್ಬನು ತನ್ನನ್ನು ಇನ್ನೊಬ್ಬ ವ್ಯಕ್ತಿಯ ಸ್ಥಾನದಲ್ಲಿ ಇರಿಸಬಹುದು ಮತ್ತು ಇತರರ ಒಳ್ಳೇದಕ್ಕಾಗಿ ಕಾರ್ಯವನ್ನು ಮಾಡಬಹುದು ಎಂಬ ವಿಚಾರವನ್ನು ಆವರಿಸಿಕೊಂಡಿತ್ತು. ಕ್ರೈಸ್ತರು ಕರುಣೆಯ ಕಾರ್ಯಗಳಲ್ಲಿ ಇನ್ನೊಬ್ಬ ವ್ಯಕ್ತಿಯ ಅರ್ಹತೆಯನ್ನು ತೀರ್ಮಾನಿಸದೆ ಅಥವಾ ಪ್ರತಿಯಾಗಿ ಏನನ್ನೂ ಕೇಳದೆ ಪ್ರೀತಿಯ ಕೊಡುಗೆಯನ್ನು ನೀಡುತ್ತಾರೆ. ಇಂಥಹ ಪ್ರೀತಿಯ ಮೂಲವು ಯಾರು ಪ್ರೀತಿಯನ್ನು ನೀಡುತ್ತಾರೋ ಅವರ ಹೃದಯದಲ್ಲಿ ಕಂಡುಬರುತ್ತದೆ, ಯಾರು ಪ್ರೀತಿಯನ್ನು ಹೊಂದಿಕೊಳ್ಳುತ್ತಾರೋ ಅವರ ಗುಣಲಕ್ಷಣದಲ್ಲಿ ಅಲ್ಲ. ದೇವರು ನಮಗಾಗಿ ರಕ್ಷಕನನ್ನು ಕಳುಹಿಸುವದರ ಮೂಲಕ ಈ ವಿಧದ ಪ್ರೀತಿಯನ್ನು ನಮಗೆ ತೋರಿಸಿದ್ದಾನೆ ಮತ್ತು ಈ ಗುಣಲಕ್ಷಣವನ್ನು ಯೇಸು ಕ್ರೂಜೆಯ ಮೇಲೆ ಪ್ರದರ್ಶಿಸಿದ್ದಾನೆ.

ಕೊರಿಂಥದಲ್ಲಿರುವ ಕ್ರೈಸ್ತರು ಅನ್ಯಭಾಷೆಯನ್ನು ಮಾತಾಡುವದಕ್ಕೆ ಉನ್ನತ ಸ್ಥಾನವನ್ನು ನೀಡಿ ಅತ್ಯಂತ ಗೌರವಯುತವಾದ ಹಂತಕ್ಕೆ ಏರಿಸಿದಾಗ, ಪೌಲನು ಅವರ ಮೌಲ್ಯ ಮಾಪನವನ್ನು ಎಚ್ಚರಿಕೆಯಿಂದ ಸಂಬೋಧಿಸುತ್ತಾನೆ. ಒಬ್ಬನು "ಮನುಷ್ಯರ ಭಾಷೆಯನ್ನು ಮತ್ತು ದೇವದೂತರ ಭಾಷೆಯನ್ನೂ ಆಡುವವನಾಗಿದ್ದರೂ" (13:1ಅ) ಪ್ರೀತಿಯಿಲ್ಲದನಾಗಿದ್ದರೆ ಅದು ಪ್ರಯೋಜನವಿಲ್ಲದ ನಾದವಾಗಿದೆ. ಪ್ರೀತಿಯು ಸ್ವಾಭಾವಿಕ ಆಶೀರ್ವಾದವಾಗಿದೆ ಅದನ್ನು ಎಲ್ಲರೂ ಬೆಳೆಸಿಕೊಳ್ಳಬಹುದು. ಅಪೋಸ್ತಲನು "ದೇವದೂತರ . . . ಭಾಷೆ" ಎನ್ನುವಾಗ ಏನೆಂದ ಅರ್ಥೈಸಿದನ್ನು ಎಂಬುದು ಖಚಿತವಾಗಿಲ್ಲ, ಆದರೆ ಅವನು ಬಹುಶಃ ಅದನ್ನು ಕೇವಲ ಧ್ವನಿಯನ್ನು ವ್ಯಕ್ತಪಡಿಸುಲು ಊಹಿಸಬಹುದಾದ ಅತೀವ ಸುಂದವಾದ ಅತಿಶಯೋಕ್ತಿಯ ವ್ಯಕ್ತಪಡಿಸುವಿಕೆ ಯಾಗಿರಬಹುದು ಎನ್ನುತ್ತಾನೆ.

13:1-3ರಲ್ಲಿ ಅಪೊಸ್ತಲನು "ನಾನು" ಪ್ರಥಮ ಪುರುಷ ಸರ್ವ ನಾಮಪದವನ್ನು ಉಪಯೋಗಿಸುತ್ತಿದ್ದಾನೆ. ಸಂದರ್ಭಕ್ಕೆ ಅವಶ್ಯವಿರುವ ಸಮಯದಲ್ಲಿ ಅವನೇ ಅನ್ಯಭಾಷೆಯಲ್ಲಿ ಮಾತನಾಡಿದ್ದನು,[3] ಆದರೆ ಅವನು ಈ ವರವು ಪ್ರೀತಿಗೆ ಪೂರಕವಾಗಿದೆ ಎಂಬುದನ್ನು ಅರಿತಿರಲಿಲ್ಲ.

**ವಚನ 1.** ಪ್ರೀತಿಯ ಅನುಪಸಸ್ಥಿತಿಯಲ್ಲಿ, ಹೆಚ್ಚು ನವೀಕರಿಸಿದ ಅನ್ಯಭಾಷೆಯ ಪ್ರದರ್ಶನ, **ನಾದಕೊಡುವ ಕಂಚು ಗಣಗಣಿಸುವ ತಾಳವೂ ಆಗಿರುತ್ತದೆ**. ಕ್ರೈಸ್ತರು ದೇವರನ್ನು ಮತ್ತು ಒಬ್ಬರನ್ನೊಬ್ಬರು ಪ್ರೀತಿಸುವಲ್ಲಿ ವಿಫಲರಾಗುವಾಗ ಸಭೆಯ ಐಕ್ಯತೆ, ಅಭಿವೃದ್ಧಿ ಮತ್ತು ಸಹೋದರ ಪ್ರೀತಿ ಅಪಾಯಕ್ಕೆ ಒಳಗಾಗುತ್ತವೆ. ಎರಡನೆಯ ಶತಮಾನದ ಪೂರ್ವದಲ್ಲಿ ಮತ್ತು ಇತರರು ಜ್ಞಾನೋಕ್ತಿಗಳ ಶೈಲಿಯಲ್ಲಿ

ವ್ಯಕ್ತಪಡಿಸುವದನ್ನು ಅಳವಡಿಸಿಕೊಂಡರು. ಮಾದರಿಯಾಗಿ, ಅವರು ಹೇಳಿದರು, ಕ್ರೈಸ್ತರು ಮತ್ತು ಅವರ ನಾಯಕರು ತಂತಿವಾದ್ಯದ ತಂತಿಗಳಂತೆ ಒಟ್ಟಾಗಿ ಇರುತ್ತಿದ್ದರು.[4] ತನ್ನ ಸ್ವಂತ ಮಹಿಮೆಗಾಗಿ ಉಪಯೋಗಿಸಿಕೊಂಡ ತಂತಿಗಳು ಕೇವಲ ಅಪಸ್ವರವನ್ನು ಮಾತ್ರ ಉತ್ಪಾದಿಸಲು ಸಾಧ್ಯ.

"ತಾಳ" ಈ ಪದವನ್ನು *χαλκός* (*chalkos*) ಎಂಬ ಪದದಿಂದ ತೆಗೆದುಕೊಳ್ಳಲಾಗಿದೆ, ವಾಸ್ತವತೆಯಲ್ಲಿ ಇದರ ಅರ್ಥ ತಾಮ್ರ ಅಥವಾ ಕಂಚು ಆಗಿದೆ. ಕ್ರಿ.ಶ. 146ರಲ್ಲಿ ರೋಮನ್ನು ಕೊರಿಂಥದ ಮೇಲೆ ಪ್ರಭುತ್ವವನ್ನು ಸಾಧಿಸಿದಾಗ, ಕೊರಿಂಥದವರ ತಾಮ್ರದಿಂದ ಮಾಡಿದ ಕಲಾಕೃತಿಗಳಿಗೆ ಅತ್ಯುತ್ತಮವಾದ ಬೆಲೆಯಿತ್ತು. ಕೊರಿಂಥದ ತಾಮ್ರದ ಕಲಾಕೃತಿಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಪಟ್ಟಣವು ಸೂರೆಗೊಂಡ ಎರಡನೂರು ವರ್ಷಗಳ ನಂತರ ರೋಮನ ವೈಭವವನ್ನು ಉಲ್ಲೇಖಿಸುತ್ತಿದ್ದಾನೆ ಮತ್ತು ಪೌಲನು ಎಫೆಸ ದಿಂದ ಬರೆಯುತ್ತಿದ್ದಾನೆ ಎಂಬುದು ಅಸಂಬವನೀಯ, ಮುಂದೆ, ಇಂಥಹ ಊಹೆ ಆತನ ಹೇಳಿಕೆಗೆ ಸ್ವಲ್ಪ ಅರ್ಥವನ್ನು ನೀಡಿತು. ಇತ್ತೀಚಿನ ಧ್ವನಿಗತಿಶಾಸ್ತ್ರ ವಿಜ್ಞಾನದ ಸಿದ್ಧಾಂತದಿಂದ ಮಾಡಿದ ಪಾತ್ರೆಗಳನ್ನು ನಾಡಕ ಮಂದಿರಗಳ ಉತ್ಪಾದನೆಯನ್ನು ವೃದ್ಧಿಸಲು ಉಪಯೊಗಿಸಲಾಗುತ್ತವೆ.[5] ಈ ಒಂದು ಜೋಡನೆಯು ಸಹ ಅಸಂಭವನೀಯವಾಗಿದೆ, ಅಪೊಸ್ತಲನು ಕೆಲವು ನಕಾರಾತ್ಮಕ ಪರಿಣಾಮಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರುವದರಿಂದ; ಅವನು ಪ್ರೀತಿಯಿಲ್ಲದೇ ಇರುವಾಗ ಮಾತನಾಡಿದ ಅನ್ಯಭಾಷೆಗಳು ಶೋತೃಗಳಿಗೆ ಕಂಚಿನಿಂದ ಮಾಡಿದ ಪಾತ್ರೆಗಳಿಗಿಂತ ಹೆಚ್ಚು ಲಾಭದಾಯಕವಾಗಿಲ್ಲ ಎಂದು ಆತನು ಹೇಳುತ್ತಾನೆ. ಕೊನೆಯಲ್ಲಿ, ಸಂಪ್ರದಾಯಿಕ ವಿವರಣೆಯು ಉತ್ತಮವಾದದ್ದಾಗಿದೆ. ಪೌಲನ "ಗಣಗಣಿಸುವ" ತಾಳವು ಯಾವುದೇ ಸಂಗೀತದ ಕಾರ್ಯವಿಲ್ಲದ ಲೋಹದ ತುಂಡಾಗಿದೆ. "ಗಣಗಣಿಸುವ ತಾಳ" ಕ್ಕೆ ಸಮಾನಾಂತರದಲ್ಲಿರುವ ಒಂದು ತುಂಡಾಗಿದೆ. ಒಂದು ತಾಳವನ್ನು ಬಡಿಯುವಾಗ ಧ್ವನಿಯನ್ನು ಉತ್ಪಾದಿಸುತ್ತದೆ, ಆದರೆ ಯಾವುದೇ ಪ್ರಯೋಜನವಿಲ್ಲ; ಅದರಂತೆ, ವಯಕ್ತಿಕ ಮಹಿಮೆಗಾಗಿ ಅನ್ಯಭಾಷೆಯಲ್ಲಿ ಮಾತಾಡುವದು ಕ್ರಿಸ್ತನ ದೇಹಕ್ಕೆ ಯಾವುದೇ ರೀತಿಯ ಕೊರತೆಯನ್ನು ನೀಡುವದಿಲ್ಲ.

**ವಚನ 2.** ಯಾರು ಪ್ರೀತಿಯಿಲ್ಲದೇ ವರಗಳನ್ನು ಪ್ರಯೋಗದಲ್ಲಿ ತರುತ್ತಾರೋ ಅದು **ಪ್ರಯೋಜನವಿಲ್ಲದ್ದು**. ಈ ಅಧ್ಯಾಯದಲ್ಲಿ ಐದು ಸಾರಿ, ಪೌಲನು "ಒಂದುವೇಳೆ" (*ἐάν*, *ean*) ಎಂಬ ಪದವನ್ನು ಉಪಯೋಗಿಸುತ್ತಾನೆ. ಅವನು ಮೊದಲನೆಯದಾಗಿ ಕ್ರೈಸ್ತರಲ್ಲಿರುವ ವಿಷಯದ ಮೇಲೆ ಕೇಂದ್ರಿಕರಿಸಿದನು ಎಂಬುದರಲ್ಲಿ ಸಂಶಯವಿಲ್ಲ: "ನಾನು ಮನುಷ್ಯರ ಭಾಷೆಗಳನ್ನೂ . . ." (13:1). ನಂತರ ಅವನು ಮುಂದುವರೆಯುತ್ತಾನೆ, **ಒಂದುವೇಳೆ ನನಗೆ ಪ್ರವಾದನವರವಿದ್ದರೂ . . . ನನಗೆ ಬೇಕಾದಷ್ಟು ನಂಬಿಕೆಯಿದ್ದರೂ . . .** ಮುಂದೆ ಆತನು ಹೇಳುತ್ತಾನೆ, "... ನನಗಿರುವದೆಲ್ಲವನ್ನೂ ಬಡವರ ಪೋಷಣೆಗೆ ನೀಡಿದರೂ ಮತ್ತು ನಾನು ನನ್ನ ದೇಹವನ್ನು . . . ಒಪ್ಪಿಸಿದರೂ." ಈ ಎಲ್ಲಾ ಕಾರ್ಯಗಳು ಯಾರು ಕ್ರಿಸ್ತನನ್ನು ಅರಿತಿರುತ್ತಾರೋ ಅವರಿಗೆ ಶ್ರೇಷ್ಠವಾದ ಗೌರವವನ್ನು ನೀಡುತ್ತವೆ; ಆದಾಗ್ಯೂ ಪಾಲನು ಹೇಳುತ್ತಾನೆ ಇವೆಲ್ಲವೂ ಪ್ರೀತಿಯಿಲ್ಲದಿದ್ದರೆ ನನಗೆ ಯಾವ ಪ್ರಯೋಜನವೂ ಇಲ್ಲ. ಕ್ರೈಸ್ತರು ಮಾಡುವ ಯಾವ ಕಾರ್ಯವು ಕ್ರಿಸ್ತನಿಗೆ ಮಹಿಮೆ ತರುವದಿಲ್ಲ ಅಥವಾ ಪ್ರೀತಿಯ

ಅನುಪಸ್ಥಿತಿಯಲ್ಲಿ ಆತನ ರಾಜ್ಯವನ್ನು ಕಟ್ಟುವದಿಲ್ಲ. ಪೌಲನು ಶ್ರೇಷ್ಠವಾದ ವರಗಳಿಗಾಗಿ ತವಕಪಡಿರಿ ಎಂದು ಹೇಳುತ್ತಾನೆ (12:31), ಆದರೆ ಆತನು ಸಹೋದರರು ಈ ವರಗಳನ್ನು ದೃಷಿಕೋನದಲ್ಲಿ ಇಟ್ಟುಕೊಳ್ಳಬೇಕೆಂದು ಬಯಸುತ್ತಾನೆ.

ಪ್ರವಾದನೆಯು ವರವು ಬೋಧನೆಯ ಭಾಗವಾಗಿದೆ, ಆದರೆ ಪ್ರವಾದಿಯಾದವನು ದೇವರಿಂದ ಅಧಿಕಾರಯುತವಾಗಿ ಮಾತಾಡುತ್ತಾನೆ. ದೇವರು ಪ್ರವಾದಿಯ ಮಾತುಗಳನ್ನು ನಿರ್ದೇಶಿಸುತ್ತಾನೆ (ನೋಡಿರಿ 12:10). ಪ್ರವಾದನೆಯು ಅನ್ಯ ಭಾಷೆಗಿಂತ ಸಭೆಯನ್ನು ಕಟ್ಟುವದಕ್ಕಾಗಿ ಹೆಚ್ಚಾದದ್ದನ್ನು ಮಾಡುತ್ತದೆ ಯಾಕಂದರೆ ಪ್ರವಾದನೆ ಹೇಳುವವನು, "ಭಕ್ತಿವೃದ್ಧಿಯನ್ನೂ ಪ್ರೋತ್ಸಾಹವನ್ನೂ, ಸಂತೈಸುವಿಕೆಯನ್ನೂ ಉಂಟುಮಾಡುತ್ತಾನೆ" (14:3). ಅನ್ಯಭಾಷೆಯಲ್ಲಿ ನೀಡುವ ಸಂದೇಶವು ಅರ್ಥೈಸುವವರಿಲ್ಲದೇ ಅರ್ಥಹೀನವಾಗುತ್ತವೆ, ಆದರೆ ಪ್ರವಾದಿಯು ದೇವರಿಂದ ಬಂದ ಶ್ರೇಷ್ಠವಾದ ಸತ್ಯಗಳನ್ನು ಸಾರುತ್ತಾನೆ, ಇದರಿಂದಾಗಿ ಅವರು ಸ್ಪಷ್ಟವಾಗಿ ತಿಳಿದುಕೊಳ್ಳುತ್ತಾರೆ. ಇಂಥಹ ನಾಯಕರ ಮಾರ್ಗದರ್ಶನದಲ್ಲಿ, "ಇತರರನ್ನು ಬಲಪಡಿಸುತ್ತಾರೆ, ಮತ್ತು ಅವರನ್ನು ಸಂತೈಸುತ್ತಾರೆ" (NLT).

ಪ್ರವಾದನೆಯಿಂದ, ಅಪೊಸ್ತಲನು **ರಹಸ್ಯಗಳನ್ನು** (μυστήρια, *mustēria*) ತಿಳಿದುಕೊಳ್ಳುವದರ ಕಡೆಗೆ ತಿರುಗಿಸುತ್ತಾನೆ. ಇದು ಗ್ರೀಕ್ರ ಧಾರ್ಮಿಕ ಲೋಕದಲ್ಲಿ ಮಹತ್ವದ್ದಾಗಿತ್ತು. Dionysus ಮತ್ತು Demeter ಧರ್ಮವಿಧಿಗಳಿಗೆ ಸಮರ್ಪಿಸಿದ ಸಂಪ್ರದಾಯಗಳು ಬಹಳ ಹಿಂದಿನ ಕಾಲದ ರಹಸ್ಯಗಳಾಗಿದ್ದವು. ಇವುಗಳು ದೇವತೆಗಳ ಆಳವಾದ ಸಂಗತಿಗಳನ್ನು ಅನುಭವಿಸಲು ನೇತೃತ್ವವಹಿಸಲು ಬಯಸುವವರಿಗೆ ಅವಶ್ಯವಾಗಿದ್ದವು. ರಹಸ್ಯ ಧರ್ಮವಿಧಿಗಳು ಪೌರಾತ್ಯ ಧರ್ಮವಿಧಿಗಳಲ್ಲಿ ಸಹ ಮಹತ್ವವುಳ್ಳದ್ದಾಗಿದ್ದವು ಉದಾಹರಣೆಗೆ Isis ಮತ್ತು Cybele, ದೇವತೆಗಳು, ಇತ್ತೀಚೆಗೆ ಗ್ರೀಕ್ ಲೋಕದಲ್ಲಿ ಪರಿಚಯವಾಗಿದ್ದವು, ಕ್ರಿಸ್ತನಲ್ಲಿ, ರಹಸ್ಯಗಳು ತೆರೆಯಲ್ಪಟ್ಟವು (ಎಫೆಸ 3:4-6, 9), ಹಾಗೂ, ಎಲ್ಲಾ ರಹಸ್ಯಗಳ ಜ್ಞಾನವು - ವಿಗ್ರಹಾರಾಧಕರ, ಯೆಹೂದ್ಯರ ಅಥವಾ ಕ್ರೈಸ್ತರ ಪ್ರೀತಿಯ ಮಾರ್ಗದರ್ಶನವಿಲ್ಲದೆ ಪ್ರಯೋಜನವಿಲ್ಲದವುಗಳಾಗಿದ್ದವು.

**ಜ್ಞಾನವು** ಪೌಲನ ಹೃದಯಕ್ಕೆ ಸಮೀಪವಾಗಿತ್ತು. "ವಾಣಿಯಿಂದ ಹತ್ತು ಸಾವಿರ ಮಾತುಗಳನ್ನಾಡು"ವದಕ್ಕಿಂತ "ನನ್ನ ಬುದ್ಧಿಯಿಂದ ಐದೇ ಮಾತುಗಳನ್ನಾಡುತ್ತೇನೆಂದು ದೇವರನ್ನು ಕೊಂಡಾಡುತ್ತೇನೆ" ಎಂದು ಅವನು ಹೇಳುತ್ತಾನೆ (1 ಕೊರಿಂಥ 14:19). ಕ್ರೈಸ್ತ ನಂಬಿಕೆ, ಆತನ ಮನಸ್ಸಿನಲ್ಲಿ ಮತ್ತು ಆತನ ಹೃದಯದಲ್ಲಿ, ಅವನ ಜ್ಞಾನದ ಮೇಲೆ ನೆಲೆಯಾಗಿತ್ತು; ಆದರೆ ಕರ್ತನೆಡೆಗೆ ಮತ್ತು ಆತನ ಜನರೆಡೆಗೆ ಪ್ರೀತಿಯಿಲ್ಲದ ಜ್ಞಾನ ನಿರರ್ಥಕವಾದದ್ದು. ಕ್ರೈಸ್ತರಿಗೆ ನಂಬಿಕೆಗಿಂತ ಹೆಚ್ಚು ಮಹತ್ವವಾದದ್ದು ಯಾವುದೂ ಇಲ್ಲ. ನೀಟಾದ ಕಲ್ಪನೆಯಾಗಿದೆ; ಅದು ವಿಶ್ವಾಸಿಗೆ ದೇವರ ಮೇಲಿರುವ ನಂಬಿಕೆ ಮತ್ತು ನೀರಿಕ್ಷೆಯನ್ನು ಸುತ್ತಿಕೊಂಡಿರುತ್ತದೆ, ಯೇಸು ನಂಬಿಕೆಯು ಅಸಾಧ್ಯವಾದ ಸಂಗತಿಗಳನ್ನು ಸಾಧ್ಯವಾಗಿಸುತ್ತದೆ ಎಂದು ಹೇಳುವಾಗ ಅಲಂಕಾರಿಕ ಭಾಷೆಯನ್ನು ಉಪಯೋಗಿಸುತ್ತಾನೆ (ಮತ್ತಾಯ 21:21). ಪ್ರೀತಿಯಿಲ್ಲದೇ ಜ್ಞಾನ ಅಥವಾ ನಂಬಿಕೆಯನ್ನು ಹೊಂದಿಕೊಳ್ಳಬೇಕಾದರೆ ಕ್ರಿಸ್ತನಲ್ಲಿ ಜೀವಿತವನ್ನು ಹಾಸ್ಯಾಸ್ಪದವಾಗಿ ಮಾಡಿಕೊಳ್ಳುವದಾಗಿದೆ.

**ವಚನ 3.** ಪೌಲನು ಹೇಳುತ್ತಾನೆ ಮಹತ್ಕಾರ್ಯಗಳನ್ನು ಮಾಡುವ ವರಗಳಿಗಿಂತ ಉತ್ಕೃಷ್ಟವಾದ ವರಗಳು - ವಾಣಿಗಳನ್ನಾಡುವದು, ಪ್ರವಾದನೆ, ಜ್ಞಾನ ಮತ್ತು ನಂಬಿಕೆ ಸಹ - ಇದನ್ನು ಪ್ರಯೋಗದಲ್ಲಿ ತರುವವನಿಗೆ ಪ್ರೀತಿಯಿಲ್ಲದಿದ್ದರೆ **ಅದು ಪ್ರಯೋಜನವಿಲ್ಲದ್ದು.** ಒಬ್ಬನು ಈ ವರಗಳನ್ನು ಅತ್ಯುನ್ನತವಾದ ಮಟ್ಟದಲ್ಲಿ ಹೊಂದಿಕೊಂಡಿದ್ದರೂ ಪ್ರೀತಿಯಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ಒಂದು ವಿಧದ ಜ್ಞಾನ ವಯಕ್ತಿಕ ಸ್ಪರ್ಧೆಗೆ ನಡೆಸುತ್ತದೆ ಅದು ಕ್ರಿಸ್ತನ ದೇಹದ ಐಕ್ಯತೆಗೆ ವಿನಾಶಕಾರಿಯಾಗಿದೆ. ಅಂತರಜ್ಞಾನವನ್ನು ಹೊಂದಿದ ಪ್ರವಾದಿಯು ಮಾತ್ರ ಯಾವ ಅಳಕೂ ಇಲ್ಲದೇ ಪ್ರವಾದನೆಯ ಸತ್ಯವನ್ನು ಪ್ರಕಟಿಸಬಹುದು. ಅವನಿಗೆ ವೇದವಾಕ್ಯದ ಮತ್ತು ಎಲ್ಲಾ ರಹಸ್ಯಗಳನ್ನು ತಿಳಿದುಕೊಳ್ಳುವ ವರವಿರಬಹುದು; ಆದಾಗ್ಯೂ, ಪ್ರೀತಿ ತುಂಬಿದ ಹೃದಯದಿಂದ ಮಾತನಾಡುವಲ್ಲಿ ವಿಫಲನಾದರೆ, ಅವನ ಪ್ರಯತ್ನಗಳು ಖಚಿತವಾದ ವಿಫಲತೆಗೆ ಕಾರಣವಾಗುತ್ತವೆ.

ಯೇಸು ತನ್ನ ಶಿಷ್ಯರಿಗೆ "ಅವರಿಗೆ ಸಾಸಿವೆ ಕಾಳಿನಷ್ಟು ನಂಬಿಕೆ ಇರುವುದಾದರೆ ನೀನು ಈ ಬೆಟ್ಟಕ್ಕೆ ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಹೋಗುತ್ತದೆ ಎಂದು ಹೇಳಿದನು (ಮತ್ತಾಯ 17:20). ಬೇಕಾದಷ್ಟು ನಂಬಿಕೆಯಿದ್ದರೂ ಪ್ರೀತಿಯಿಲ್ಲದಿದ್ದರೆ ಎಲ್ಲವೂ ವ್ಯರ್ಥ. John Stott ಅವರು ಈ ರೀತಿಯಲ್ಲಿ ಹೇಳುತ್ತಾರೆ, "ಪ್ರೀತಿಯು ಪ್ರಧಾನ, ಶ್ರೇಷ್ಠ, ಉತ್ತಮೋತ್ತಮವಾದ, ವ್ಯತ್ಯಾಸವನ್ನು ತೋರಿಸುವ ದೇವರ ಜನರ ಗುಣಲಕ್ಷಣವಾಗಿದೆ. ಯಾವುದು ನೆಲೆ ತಪ್ಪಿಸಲು ಅಥವಾ ಸ್ಥಾನಪಲ್ಲಟಗೊಳಿಸಲು ಸಾಧ್ಯವಿಲ್ಲ. ಪ್ರೀತಿ ಸರ್ವಶ್ರೇಷ್ಟವಾಗಿದೆ."[6] ಕೊರಿಂಥದವರ ಪ್ರಯೋಗದಲ್ಲಿ, ಅವರ ಸಿದ್ಧಾಂತಗಳಲ್ಲಿ ಇರುವದಿಲ್ಲವಾದರೂ, ಪ್ರೀತಿಯನ್ನು ಅದ್ಭುತವಾದ ವರಗಳ ಸ್ಥಾನದಲ್ಲಿ ಇರಿಸಲಾಗಿದೆ.

ಪ್ರೀತಿಯಿಲ್ಲದೆ, ಆತ್ಮೀಕ ವರಗಳು ಲಾಭದಾಯಕವಲ್ಲ. ಪೌಲನಿಗೆ ಅದು ಇರುವಂತೆಯೇ ತನ್ನ ಓದುಗರ ಮೇಲೆ ಪ್ರಭಾವವನ್ನು ಬೀರುವ, ಪ್ರೀತಿಯಿಂದ ಪ್ರೇರೆಪಿಸಲ್ಪಟ್ಟವನು ಹೇಗೆ ವರ್ತಿಸಬೇಕು ಎಂಬುದನ್ನು ವ್ಯಾಖ್ಯಾನಿಸಬೇಕೆಂದೇನಿಲ್ಲ. ಪ್ರೀತಿಯಾಗಲಿ ನಂಬಿಕೆಯಾಗಲಿ ಅಮೂರ್ತತೆಯಿಂದ ಸ್ಥಿರತೆಗೆ ಸ್ಥಳಾಂತರಿಸದ ಹೊರತು ಕ್ರಿಸ್ತನಂತಾಗುವದಿಲ್ಲ. ಈ ಕಾರಣದಿಂದಾಗಿ, ಅಪೊಸ್ತಲನ ವಿಚಾರಗಳು ಪ್ರೀತಿಯ ವಿಚಾರದಿಂದ ಪ್ರೀತಿಯು ಪ್ರೇರೇಪಿಸಲು ಅಪೇಕ್ಷಿಸುವ ವಯಕ್ತಿಕ ತ್ಯಾಗಗಳ ವಿಧಗಳೆಡೆಗೆ ಚಲಿಸುತ್ತಾನೆ. ಉದಾಹರಣೆಗೆ ಒಬ್ಬನು, ದೊಡ್ಡ ಮೊತ್ತದ ಹಣವನ್ನು ನೀಡುವದು ಅಥವಾ ಶ್ರೇಷ್ಠವಾದ ತ್ಯಾಗವನ್ನು ಮಾಡುವದು - ತನ್ನ ಜೀವಿತವನ್ನೇ ನೀಡುವದು - ಅಹಂಕಾರದಿಂದ, ಹಟಮಾರಿತನದಿಂದ ಅಥವಾ ಜನಪ್ರಿಯತೆಯ ಇಚ್ಚೇಯಿಂದ. ಒಬ್ಬ ವ್ಯಕ್ತಿಯು ಯಾವುದೇ ರೀತಿಯ ಸಹಿಸಿಕೊಂಡಿದ್ದಾಗ್ಯೂ, ಒಬ್ಬನು ಎಷ್ಟೇ ವಯಕ್ತಿಕವಾಗಿ ಭಾದೆಗಳನ್ನು ಸಹಿಸಿಕೊಳ್ಳಲಿ, ಪೌಲನು ಹೇಳುತ್ತಾನೆ ತನ್ನ ಸಹೋದರನಿಗೆ ಅಥವಾ ದೇವರಿಗೆ ಅದನ್ನು ಪ್ರೀತಿಯಿಂದ ಮಾಡದೇ ಹೋದರೆ ಅದು ಪ್ರಯೋಜನವಿಲ್ಲದ್ದಾಗಿದೆ. ಕ್ರಿಸ್ತನಲ್ಲಿ, ಒಬ್ಬನು ಏನು ಮಾಡುತ್ತಾನೋ ಅದು ಮಹತ್ವವುಳ್ಳದ್ದಾಗಿಲ್ಲ, ಆದರೆ ಯಾವ ಹೃದಯದಿಂದ ಈ ಕ್ರಿಯೆಗಳು ಪುಟಿಯುತ್ತಾವೋ ಅದು ಸಹ ಮಹತ್ವವುಳ್ಳದ್ದಾಗಿದೆ.

13:3ರ ಗ್ರೀಕ್ ಅನುವಾದದಲ್ಲಿ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ಮೊದಲನೆಯದಾಗಿ ಉತ್ತಮವಾದ ರೀತಿಯಲ್ಲಿ ಕ್ರಿಯಾಪದವನ್ನು ψωμίζω (*psōmizō*,

"feed"), ಸೂಚಿಸುವ ಮಾರ್ಗ ಇದು ಹೊಸ ಒಡಂಬಡಿಕೆಯಲ್ಲಿ ಕೇವಲ ರೋಮ 12:20ರಲ್ಲಿ ಬರುತ್ತದೆ. ಇದು ಹಲವು ವಿಧವಾದ ಕೊಡುವಿಕೆಯನ್ನು ಸೂಚಿಸುತ್ತವೆ, ಮುಖ್ಯವಾಗಿ, "ಆಹಾರವನ್ನು ನೀಡುವದು" ಅಥವಾ "ರೊಟ್ಟಿಯ ತುಂಡನ್ನು ನೀಡುವದು." ψωμί (*psōmi*) ಆಧುನಿಕ ಗ್ರೀಕ್ ಲೋಕದಲ್ಲಿ ರೊಟ್ಟಿ ಆಗಿದೆ. NASB ಪದದ ಪ್ರಾಮುಖ್ಯವಾದ ಅರ್ಥವನ್ನು ಸೂಚಿಸುತ್ತದೆ ಬಡವರನ್ನು ಪೋಷಿಸುವ ವಿಷಯದಲ್ಲಿ ನೀಡುತ್ತದೆ.

ಎರಡನೆಯ ಪ್ರಶ್ನೆ 1 ಕೊರಿಂಥ ಪತ್ರಿಕೆಯ ಪ್ರಾಚೀನ ಗ್ರೀಕ ನಕಲುಗಳ ಕುರಿತು. ಕಳಕಳಿಯನ್ನು ಹೊಂದಿದೆನು. ಗ್ರೀಕ್ ಶಬ್ದವು ಹೊಂದಿರುವ ಅದೇ ಸೂಕ್ಷ್ಮ ವ್ಯತ್ಯಾಸದೊಂದಿಗಿರುವ ಇಂಗ್ಲಿಷ್ ಪದವನ್ನು ಕಂಡುಹಿಡಿಯುವುದು ಅನುವಾದಕರಿಗೆ ಒಂದು ಸವಾಲಾಗಿದೆ. ಇನ್ನೊಂದು ಗ್ರೀಕ್ ಪಠ್ಯದ ಪ್ರಾಚೀನ ಹಸ್ತಪ್ರತಿ ವಿಭಿನ್ನವಾಗಿದೆ. **ನನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರು** ಎಂಬ ಉಪವಾಕ್ಯ ಇಂಗ್ಲಿಷ್ ಅನುವಾದಕ್ಕೆ ಸುಮಾರು ಏಕಾಂಗಿಯಾಗಿವೆ. ಹೇಗಾದರೂ, ಗಣನೀಯ ಸಾಕ್ಷ್ಯವು ವಿಭಿನ್ನ ಅರ್ಥವನ್ನು ಸೂಚಿಸುತ್ತದೆ. καυθήσομαι (*kauthēsomai*, "ಸುಡಬೇಕಾದ" ಎಂಬ ಅರ್ಥವನ್ನು ಕೊಡುವ ಭವಿಷ್ಯದ ನಿಷ್ಕ್ರಿಯ ಸೂಚಕ) ಅಥವಾ καυθήσωμαι (*kauthēsōmai*, "ಸುಟ್ಟುಹೋಗಬೇಕಾದ" ಎಂದು ಅರ್ಥ ಕೊಡುವ ಅಶ್ಚಿತ ಕಾಲದ ಸಂಶಯಾರ್ಥಕ ರೂಪದಲ್ಲಿರುವ ಕರ್ಮಣಿ),[7] καυχήσωμαι (*kauchēsōmai*, "ತನ್ನನ್ನು ತಾನು ಹೆಮ್ಮೆಪಡುವ ಅಥವಾ ವೈಭವವನ್ನು ಹೊಂದುವುದು"). ಈ ಪದಗಳು ಉಚ್ಚಾರಣೆಯಲ್ಲಿ ಪರಸ್ಪರ ಅತ್ಯಂತ ಸಮೀಪವಾಗಿವೆ. ಒಬ್ಬ ಪ್ರಾಚೀನ ಶಾಸ್ತ್ರಿಯು ಆಕಸ್ಮಿಕವಾಗಿ ಇನ್ನೊಂದು ಪದವು ತನ್ನ ಮುಂದಿರುವಾಗ ಮತ್ತೊಂದನ್ನು ನಕಲು ಮಾಡಿದನು. ಪಠ್ಯಗಳ ಪಂಡಿತರು ಸಾಮಾನ್ಯವಾಗಿ ಶಾಸ್ತ್ರಿಗಳು ಸ್ವೀಕರಿಸಿಕೊಳ್ಳುವದು ಮತ್ತು ಪಠ್ಯವನ್ನು ಸರಳವಾಗಿಸುವ ಸಾಹಿತ್ಯವನ್ನು ತಪ್ಪಾಗಿ ನಕಲು ಮಾಡುತ್ತಿರುವದು ಹೆಚ್ಚು ಸಂಭನೀಯವಾಗಿತ್ತು ಎಂಬುದನ್ನು ಸ್ವೀಕರಿಸುತ್ತಾರೆ. ಆದುದರಿಂದ, ಅವರು ಹೆಚ್ಚು ಕಠಿಣವಾದ ಸಾಹಿತ್ಯವನ್ನು ಮೂಲ ಸಾಹಿತ್ಯ ಎಂದು ಸ್ವೀಕರಿಸುತ್ತಿದ್ದರು. ಈ ವಿಷಯದಲ್ಲಿ, ಹೆಚ್ಚು ಕಠಿಣ ಮತ್ತು ಹೆಚ್ಚು ನಂಬಲರ್ಹವಾದ ಸಾಹಿತ್ಯವೆಂದರೆ "ಹೊಗಳಿಕೊಳ್ಳುವದು." ಒಂದು ವೇಳೆ ಪೌಲನು ಬರೆಯುವಾಗ *kauchēsōmai* ಎಂಬ ಕ್ರಿಯಾಪದವನ್ನು ಉಪಯೋಗಿಸದ್ದರೆ, ಉತ್ತಮವಾದ ಅನುವಾದವು ". . . ನಾನು ಹೊಗಳಿಕೊಳ್ಳಬಾರದೆಂದು ನನ್ನ ದೇಹವನ್ನು ನೀಡಿದ್ದಾರೆ." ಸುದೈವದಿಂದ, ಎರಡೂ ಸಾಹಿತ್ಯಗಳಲ್ಲಿ ಇರುವ ವ್ಯತ್ಯಾಸದ ಪರಿಣಾಮ ಅರ್ಥದಲ್ಲಿ ಒಂದು ಸಣ್ಣ ವ್ಯತ್ಯಾಸದ ಪರಿಣಾಮವಾಗಿದೆ.

## ಪ್ರೀತಿಯ ಗುಣಲಕ್ಷಣ (13:4-7)

**4ಪ್ರೀತಿ ಬಹು ತಾಳ್ಮೆಯುಳ್ಳದ್ದು ಪ್ರೀತಿ ದಯೆ ತೋರಿಸುವದು. ಪ್ರೀತಿಯು ಹೊಟ್ಟೆಕಿಚ್ಚು**
**ಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲ ಮರ್ಯಾದೆಗೆಟ್ಟು ನಡೆಯುವದಿಲ್ಲ.**
**5ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ**
**ಇಟ್ಟುಕೊಳ್ಳುವದಿಲ್ಲ; 6ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ**
**ಸಂತೋಡಪಡುತ್ತದೆ; 7ಎಲ್ಲವನ್ನೂ ಅಡಗಿಸಕೊಳ್ಳುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ.**

1874ರಲ್ಲಿ, ಊeಟಿಡಿಥಿ Henry Drummond, ತಮ್ಮ ಅತ್ಯುತ್ತಮ ಪ್ರಸಂಗದಲ್ಲಿ ಪೌಲನ ಪ್ರೀತಿಯ ವರ್ಣನೆಯನ್ನು ಪ್ರಕಾಶಮಾನವಾದ ದೀಪಕ್ಕೆ ಹೋಲಿಸಿದ್ದಾರೆ ವರ್ಣಪಲ್ಲಟ ಕೊಳವೆಯ ಮೂಲಕ ತನ್ನದೇ ಆದ ಭಾಗಗಳಲ್ಲಿ ಮುರಿಯಲ್ಪಟ್ಟು ಹೊಳೆಯುವ ಪ್ರಕಾಶಮಾನವಾದ ದೀಪಕ್ಕೆ ಹೋಲಿಸಿದ್ದಾರೆ. Drummond ಅವರು ಬರೆಯುತ್ತಾರೆ,

> ವಿಜ್ಞಾನಿಗಳು ಹೇಗೆ ಬೆಳಕಿನ ಕಿರಣಗಳನ್ನು ತೆಗೆದುಕೊಂಡು ಅದನ್ನು ಸ್ಪಟಿಕದಂತ ವರ್ಣಪಲ್ಲಟ ಕೊಳವೆಯ ಮೂಲಕ ಅದನ್ನು ತೂರಿಸುವಾಗ, ನೀವು ನೋಡಿರುವ ಹಾಗೆ ಅದು ವರ್ಣಪಲ್ಲಟ ಕೊಳವೆಯ ಇನ್ನೊಂದು ಬದಿಯಿಂದ ವಿವಿಧ ಬಣ್ಣಗಳಾಗಿ ಮುರಿದು ಹೊರಗೆ ಬರುತ್ತದೆ - ಕೆಂಪು, ನೀಲಿ, ಹಳದಿ, ನೇರಳೆ, ಕೇಸರಿ ಮತ್ತು ಕಾಮನಬಿಲ್ಲಿನಲ್ಲಿರುವ ಎಲ್ಲಾ ಬಣ್ಣಗಳು, ಪೌಲನು ಈ ವಿಷಯವನ್ನು, ಪ್ರೀತಿಯನ್ನು ಅದ್ಭುತವಾದ ವರ್ಣಪಲ್ಲಟ ಕೊಳವೆಯಾಗಿರುವ ಪ್ರೇರೇಪನೆಯನ್ನು ಹೊಂದಿರುವ ತನ್ನ ಬುದ್ಧಿವಂತರ ಮೂಲಕ ತೂರಿಸುತ್ತಾನೆ ಮತ್ತು ಅದು ಇನ್ನೊಂದು ಬದಿಯಿಂದ ತನ್ನ ತುಂಡುತುಂಡಾದ ಅಂಶಗಳ ಮೂಲಕ ಹೊರಬರುತ್ತದೆ.[8]

"ಪ್ರೀತಿಯು" ಇಂಥಹ ಹೊಳೆಯುವ ಆಕರ್ಷಣೆಯಾಗುತ್ತದೆ. ಇಂಥಹ ಮೇಲಿಂದ ಮೇಲೆ ಉಪಯೋಗಿಸುವ ಮತ್ತು ಎಲ್ಲವನ್ನೂ ಒಳಗೊಂಡಿರುವ ಪದವು, ಇಂಗ್ಲೀಷ್ ಭಾಷೆಯನ್ನು ಮಾತನಾಡುವ ದೇಶಗಳಲ್ಲಿ ತನ್ನ ಅರ್ಥವನ್ನು ಕಳೆದುಕೊಂಡಿದೆ. ಇದಕ್ಕೆ ಹೆಚ್ಚು ಬಲ ಅಥವಾ ರಹಸ್ಯ ಉಳಿದಿಲ್ಲ. ಪರಿಪೂರ್ಣವಾದ ಪ್ರಾಮಾಣಿಕತೆಯೊಂದಿಗೆ, ಜನರು ತಮ್ಮ ಅಚ್ಚು ಮೆಚ್ಚಿನ ಆಹಾರಗಳು ಮತ್ತು ಹವ್ಯಾಸಗಳಿಂದ ತಮ್ಮ ದೇಶಗಳನ್ನು ತಮ್ಮ ತಾಯಂದಿರನ್ನು ಪ್ರೀತಿಸುತ್ತೇವೆ ಎಂದು ಹೇಳಿಕೊಳ್ಳುತ್ತಾರೆ. ಇದೇ ಪದವನ್ನು ತನ್ನ ಬಾಲ್ಯದ ಸ್ನೇಹಿತರನ್ನು ಮತ್ತು ಜನಪ್ರಿಯ ನೋವನ್ನು ವರ್ಣಿಸುವದಕ್ಕಾಗಿ ಉಪಯೋಗಿಸಲಾಗಿದೆ. ಜಾಹಿರಾತದಾರರು ತಮ್ಮನ್ನು "ಪ್ರೀತಿ" ಎಂಬ ಪದವನ್ನು ವಾಹನದ ಮೇಲೆ, ಔಷದ ಶಾಸ್ತ್ರ ಉತ್ಪಾದನೆಗಳು ಮತ್ತು ವಸ್ತ್ರಗಳ ಮೇಲೆ ಹಾಕುತ್ತಾರೆ. ಇದರ ಅರ್ಥ ಎಲ್ಲವೂ/ಎಂದರೆ ಏನೂ ಇಲ್ಲ.

"ಪ್ರೀತಿ" ಎಂಬ ಪದದ ಇಂಥಹ ಕ್ಷೀಣ ಸ್ಥಿತಿಯು ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಗ್ರೀಕೋ ರೋಮನ್ ಲೋಕದ ಮೊದಲನೆಯ ಶತಮಾನದ ಪ್ರಾಮುಖ್ಯ ಕ್ರೈಸ್ತ ಕಲ್ಪನೆ *agapē* ಯನ್ನು ಆಯ್ಕೆ ಮಾಡಿಕೊಳ್ಳಲು ತೀವ್ರವಾದ ವಿರೋಧವನ್ನು ತರುತ್ತದೆ "ನಂಬಿಕೆ" (πίστις, *pistis*), "ಕೃಪೆ" (χάρις, *charis*), ಮತ್ತು "ನಿರೀಕ್ಷೆ" (ἐλπίς, *elpis*) ಎಂಬ ಪದಗಳು ಹೊಸ ಒಡಂಬಡಿಕೆಯ ಲೇಖಕರು ತಮ್ಮ ಸುತ್ತಲೂ ಇರುವ ಲೋಕದ ಸಾಮಾನ್ಯ ಶಬ್ದಗಳಿಂದ ಆಯ್ದುಕೊಂಡಿದ್ದಾರೆ. ಅವರು ಅವುಗಳನ್ನು ಪುನರುಜ್ಜೀವನಗೊಳಿಸಿ ಮತ್ತು ಅವಶ್ಯವಿದ್ದಲ್ಲಿ ಮರು ವ್ಯಾಖ್ಯಾನಿಸಿದ್ದಾರೆ; ಆದರೆ ಅದೇ ಲೋಕದಲ್ಲಿ, *agapē* ಸಾಮಾನ್ಯವಾಗಿಲ್ಲ. ಯೇಸು ತಾನೆ ಮತ್ತು ನಂತರ ಆತನ ಹಿಂಬಾಲಕರು ಸ್ವಲ್ಪ ಮಟ್ಟಿಗೆ ಉಪಯೋಗಿಸಿದ ಈ ಪದವನ್ನು ಸಂಬಂಧಗಳನ್ನು, ಮಾನವ ಮತ್ತು ದೈವೀಕ ಎರಡರ ಹೊಸ ಕಲ್ಪನೆಯನ್ನು ಪರಿಚಯಿಸಲು ಉಪಯೋಗಿಸಿದ್ದಾರೆ. ಅಪೊಸ್ತಲನ ಉದ್ದೇಶ ತನ್ನ ಸಮಕಾಲೀನರು ಪದಕ್ಕೆ ನೀಡಿರುವ ಅರ್ಥವನ್ನು ಸಂಶೋಧಿಸುವದಾಗಿರಲಿಲ್ಲ, ಅದಾಗಿಯೇ ಹೊಸ ಅರ್ಥವನ್ನು ನೀಡುವದಕ್ಕಾಗಿ. ಮೇಲಿನ

ಮಾರ್ಗದರ್ಶನದಿಂದ, ಪೌಲನು ಕ್ರೈಸ್ತ ಪ್ರೀತಿಯನ್ನು ಕ್ರಿಸ್ತನನ್ನು ಹಿಂಬಾಲಿಸುವ ಧೈರ್ಯವುಳ್ಳ ಹಿಂಬಾಲಕರಿಗೆ ವಿವರಿಸಲು ಸ್ಥಾಪಿಸಿದ್ದಾನೆ. ದೇವರು ತನ್ನ ಜನರಿಗಾಗಿ ಇಚ್ಛಿಸುವ ಪ್ರೀತಿಯನ್ನು ಪ್ರದರ್ಶಿಸುವದನ್ನು ಒಂದು ಕ್ರಿಯಾಪದ ಅಥವಾ ನಾಮಪದದೊಂದಿಗೆ ಸರಳವಾಗಿ ಉಪಯೋಗಿಸುವದಲ್ಲ.

**ವಚನ 4.** ಅಪೊಸ್ತಲನ ಪಟ್ಟಿಯು ನಮಗೆ ನಡೆತೆಯ ಆದರೆ ಭಾವನಾತ್ಮಕವಲ್ಲ ನೀಡುತ್ತದೆ.[9] ಎರಡು ಸಕಾರಾತ್ಮಕ ಮತ್ತು ಮೂರು ನಕಾರಾತ್ಮಕದವುಗಳಿಂದ ಆತನು ಪ್ರೀತಿಯ ಅಂಶಗಳ ತನ್ನ ಸಂಶೋದನೆಯನ್ನು ಪ್ರಾರಂಭಿಸುತ್ತಾನೆ.

**ಪ್ರೀತಿಯು ತಾಳ್ಮೆಯುಳ್ಳದ್ದು, ಪ್ರೀತಿಯು ದಯೆತೋರಿಸುವದು.** ನಮ್ಮನ್ನು ಇನ್ನೊಬ್ಬರ ಸ್ಥಾನದಲ್ಲಿ ಇಟ್ಟುಕೊಳ್ಳುವದೆಂದರೆ ಸಹೋದರನ ಅಥವಾ ನೆರೆಯವರ ಬಲಹೀನತೆಯಲ್ಲಿ ಕಷ್ಟಾನುಭವನ್ನು ಅವರೊಂದಿಗೆ ಅನುಭವಿಸವದು. ಇದು ತನ್ನ ಸ್ವಂತ ಬಲಹೀನತೆಗಳನ್ನು ಮತ್ತು ವಿಫಲತೆಗಳನ್ನು ಜ್ಞಾಪಿಸಿಕೊಳ್ಳುವದು ಮತ್ತು ಕ್ಷಮಿಸಲ್ಪಡಬೇಕು ಎಂದು ನಿರೀಕ್ಷಿಸುವಂತೆ ಕ್ಷಮಿಸುವದು. ಸಂಕ್ಷಿಪ್ತವಾಗಿ ಹೇಳಬೇಕಾದರೆ ಪ್ರೀತಿಯು ಕರುಣೆಯನ್ನು ಒಳಗೊಂಡಿರುತ್ತದೆ ಮತ್ತು ಅಪ್ಪಿಕೊಳ್ಳುತ್ತದೆ. ಯಾಕಂದರೆ ದೇವರು ಕರುಣೆಯುಳ್ಳವನಾಗಿದ್ದಾನೆ, ಅವನು ತನ್ನ ನೈತಿಕ ವಿಶ್ವದಲ್ಲಿ ಕರುಣೆಯನ್ನು ಬೆಳೆಸಿದ್ದಾನೆ. ಕ್ರಿಸ್ತೀಯ ಪ್ರೀತಿ ಮತ್ತು ದಯೆ ಸೃಷ್ಟಿಕರ್ತನ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ.

ಪ್ರೀತಿಯು **ಹೊಟ್ಟೆಕಿಚ್ಚು ಪಡುವದಿಲ್ಲ**. ಉಲ್ಲೇಖಿಸಿರುವ ಹೊಟ್ಟೆಕಿಚ್ಚು ಕೊರಿಂಥದಲ್ಲಿರುವ ಕ್ರೈಸ್ತರ ಮಧ್ಯದಲ್ಲಿ ಬಹಳ ಮಟ್ಟಿಗೆ ಹೆಚ್ಚು ದೃಶ್ಯವಾದ ಮಹತ್ಕಾರ್ಯಗಳ ಆತ್ಮನ ವರಗಳ ಊಹೆಯಾಗಿದೆ - ಉದಾಹರಣೆಗೆ, ವಾಣಿಗಳನ್ನಾಡುವದು, ರೋಗಿಗಳನ್ನು ಸ್ವಸ್ಥಪಡಿಸುವದು ಅಥವಾ ಪ್ರವಾದನೆ ಸಹ.

ಪ್ರೀತಿಯು **ಹೊಗಳಿಕೊಳ್ಳುವದಿಲ್ಲ ಮತ್ತು ಉಬ್ಬಿಕೊಳ್ಳುವದಿಲ್ಲ**. ಮಹತ್ಕಾರ್ಯಗಳನ್ನು ಮಾಡುವ ವರಗಳು ಉಬ್ಬಿಕೊಳ್ಳುವ ಮತ್ತು ಶ್ರೇಷ್ಠರಾಗಿದ್ದೇವೆ ಎಂಬ ನಾಟಕೀಯತೆಗೆ ನಡೆಸುತ್ತವೆ. ಈ ಸ್ಪರ್ಧಾತ್ಮಕ ಆತ್ಮನು ಕೊರಿಂಥದಲ್ಲಿರುವ ವಿಶ್ವಾಸಿಗಳನ್ನು ವಿಶ್ವಾಸಿಗಳ ವಿರುದ್ಧವಾಗಿ ಎಬ್ಬಿಸಿದ್ದಾನೆ. ಅಪೋಸ್ತಲನ ಪ್ರೀತಿಯ ವಿಶ್ಲೇಷಣೆ ಕ್ರೈಸ್ತರು ತಮ್ಮ ಹಳೆಯ ಸ್ವಾರ್ಥಪರ ಮಾರ್ಗಗಳನ್ನು ತೊಡೆದು ಹಾಕಬೇಕು ಮತ್ತು ಪ್ರೀತಿಯ ಮಾರ್ಗವನ್ನು ಕಲಿಯಬೇಕು. ಯಾರು ಪ್ರೀತಿಸುತ್ತಾರೋ ಅವರು ತಮ್ಮಲ್ಲಿ ತಾವು ಮುಳುಗಿಹೋಗುವದಿಲ್ಲ, ಯಾವಾಗಲೂ ತಮ್ಮ ಕುರಿತಾಗಿ ಮಾತಾಡುವದು ಅಥವಾ ಅವನು ಏನಾಗಿದ್ದಾನೆ ಅಥವಾ ಅವನು ಏನು ಮಾಡಿದ್ದಾನೆ ಎನ್ನುವದನ್ನು ಹೊಗಳಿಕೊಳ್ಳುವವರಾಗಿರುತ್ತಾರೆ.

ಅನ್ಯಜನರ ಅಪೋಸ್ತಲನು ಪ್ರೀತಿಯನ್ನು ವ್ಯಕ್ತಿಯ ಸ್ವಂತ ಕಾರ್ಯಕ್ರಮಪಟ್ಟಿಯಲ್ಲಿ ಸರಳವಾಗಿ ಮೆಚ್ಚಿಕೆಯನ್ನು ಹೊಂದಿಕೊಳ್ಳಬಹುದು. ಇದನ್ನು ಎಲ್ಲಾ ರೀತಿಯ ಪಕ್ಷ ಪಂಗಡಗಳ ಮತ್ತು ಅನೈತಿಕ ನಡತೆಯ ನ್ಯಾಯನಿರ್ಣಯವನ್ನು ಮಾಡುದಾಗಿದೆ. ಮುಂದೆ ಹೆಚ್ಚಿನ ಪ್ರತಿಬಿಂಬಿಸುವಿಕೆ ಮತ್ತು ವ್ಯಾಖ್ಯಾನಿಸುವದು ಇಲ್ಲದೆ, ಪ್ರೀತಿಯನ್ನು ನಾವು ಹೆಚ್ಚಾಗಿ ಪ್ರೀತಿಸದೇ ಇರುವಂಥ ಮಾನವನ ನಡೆತೆಯಲ್ಲಿರುವಂತ ಅಂಶಗಳಿಗೆ ಪ್ರೀತಿಯನ್ನು ಒಂದು ಕಾರಣವಾಗಿ ಉಪಯೋಗಿಸಿಕೊಳ್ಳಬಹುದು. ವ್ಯಭಿಚಾರ ದಿಂದ ಸುಲಿಗೆಯ ವರೆಗೆ James D. G. Dunn, ಅವರ ಪ್ರಕಾರ,

ಪ್ರೀತಿಯು ತಾನೇ . . . ತೋರಿಕೆಯ ಮೇಲಂಗಿಯಾಗಿದೆ ವಯಕ್ತಿಕ ಪ್ರಗತಿಯನ್ನು ಮುಚ್ಚಿಕೊಳ್ಳುವ ಕಾರ್ಯಕ್ರಮಪಟ್ಟಿ, ಆಡಂಬರದ ಯಾವುದೇ ನಿರ್ಭಂದಗಳನ್ನು ಕಾಶಲ್ಯದಿಂದ ನಿಭಾಯಿಸಬಲ್ಲ ದೈವೀಕ ವರ್ಚಸ್ಸಿನ ಅಧಿಕರವಾಗಿದೆ ಎಂದು ಹೇಳಿಕೊಳ್ಳುತ್ತದೆ.[10]

**ವಚನ 5.** ಪ್ರೀತಿಯು ಮರ್ಯಾದೆಗೆಟ್ಟು ನಡೆಯುದಿಲ್ಲ; ಅದು **ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ**. ಅಪೊಸ್ತಲನು ಕ್ರಿಸ್ತನ ಬಯಸುವ ಜೀವಿತದ ವಿಧದೊಂದಿಗೆ "ಪ್ರೀತಿಯ" ನಿಜವಾದ ಅರ್ಥವನ್ನು ಸೇರಿಸುತ್ತಾನೆ. ಅವನು ಈ ವ್ಯತ್ಯಾಸಕ್ಕೆ ತಿಳುವಳಿಕೆಯ ಸಹಾಯವನ್ನು ಒದಗಿಸುವಂತೆ ಮರಳುತ್ತಾನೆ. ಪ್ರೀತಿಯು ಕ್ರಿಸ್ತನಂತಲ್ಲದ ರೀತಿಯಲ್ಲಿ ವರ್ತಿಸುವದಲ್ಲ. ಸ್ವ-ಸೇವೆಯ ಗುರಿಯ ಪ್ರೇರೇಣಯೊಂದಿಗೆ, ದೇವ ಜನರು ಅವಮಾನಕರ ಎಂದು ಗುರುತಿಸುವ ವರ್ತನೆಗೆ ಸಮರ್ಥನೆನ್ನು ನೀಡುವದಾಗಿದೆ ಎಂದು ಹೇಳಬಹುದು. ಜನರು ಇತರರಿಗೆ ಮಾಡುವ ಕೆಲವು ಸಂಗತಿಗಳನ್ನು, ಪ್ರೀತಿ ಎಂದು ಎಂದಿಗೂ ಗಲಿಬಿಲಿ ಮಾಡಿಕೊಳ್ಳಬಾರದು ಎಂದು ಪೌಲನು ಹೇಳುತ್ತಾನೆ. ಇತರರ ಮೇಲೆ ಹಾಕುವ ಅವಮಾನಕರವಾದ ದೂರುಗಳು, ಒರಟಾದ ಮಾತುಗಳು, ಇತರರಲ್ಲಿ ಕೆಟ್ಟದ್ದನ್ನು ಕಾಣುವದು, ತನ್ನ ಸ್ವಂತ ಪ್ರಯೋಜನವನ್ನು ನೋಡುವದು; ಇಂಥಹ ನಡತೆಗೆ ಕ್ರೈಸ್ತ ಜೀವಿತದಲ್ಲಿ ಭಾಗವಿಲ್ಲ.

ಪ್ರೀತಿಯು **ಸಿಟ್ಟುಗೊಳ್ಳುವದಿಲ್ಲ**. ತಿಂಡಿಜ παροξύνω (*paroxunō*, "provoked") ಈ ಪದವು ಸ್ನೇಹಿತರ ಮಧ್ಯದಲ್ಲಿ ಭಿನ್ನಮತವನ್ನು ಎಬ್ಬಿಸುವದು ಎಂಬ ಸಲಹೆಯನ್ನು ನೀಡುತ್ತದೆ. ಇದು ὀξύνω (*oxunō*, "to sharpen"). ಸಂಯೋಜನೆಯಾಗಿದೆ. ಪೌಲನು ಪ್ರೀತಿಯು "ಸರಳವಾಗಿ ಸಿಟ್ಟುಗೊಳ್ಳುವದಿಲ್ಲ" (NIV) ಎಂದು ಹೇಳುವದಕ್ಕೆ ಈ ಪದವನ್ನು ಉಪಯೋಗಿಸುತ್ತಾನೆ. ಸಂಯುಕ್ತ ಕ್ರಿಯಾಪದಕ್ಕೆ ತುಚ್ಛ-ಆತ್ಮವನ್ನು ಹೊಂದಿದ ಸ್ವ-ಇಚ್ಛೆಯಿಂದ ಉದ್ಭವಸಿ ಜನರನ್ನು ಜಗಳವಾಡುವದು ಮತ್ತು ನಂತರ ಕೋಪಗೊಳ್ಳವುದಕೆ ಎಬ್ಬಿಸುತ್ತದೆ. ಪ್ರೀತಿಯು ಜಗಳಕ್ಕೆ ಕಾರಣವಾಗುವಲ್ಲಿ ಹರ್ಷಿಸುವದಿಲ್ಲ. ವಿವಾದಗಳಲ್ಲಿ ತನ್ನ ಸಂತೋಷವನ್ನು ತೃಪ್ತಿಪಡಿಸಿಕೊಳ್ಳುವದಕ್ಕಾಗಿ "ಸತ್ಯವನ್ನು ಸಮರ್ಥಿಸುವದನ್ನು" ಮುಚ್ಚಿಟ್ಟುಕೊಳ್ಳುತ್ತಾನೋ ಅವನು ಪ್ರೀತಿಯ ಕುರಿತು ಕಲಿಯುವದು ಬಹಳ ಇದೆ.

ಪ್ರೀತಿ ತಪ್ಪಾಗಿ ಅನುಭವಿಸಿದ ಶ್ರಮಯನ್ನು ಗಣನೆಗೆ ತೆಗೆದುಕೊಳ್ಳದು. ಪ್ರೀತಿಸುವ ಕ್ರೈಸ್ತನು ತಾಳ್ಮೆಯುಳ್ಳವನು. ಅವನು ಯೋಚಿಸುತ್ತಿರುವುದನ್ನು ಅನುಚಿತವಾಗಿ ಮಾಡುವಾಗ ಸುಲಭವಾಗಿ ಕಿರಿಕಿರಿಯುಂಟು ಮಾಡುವುದಿಲ್ಲ. ಅಗತ್ಯವಿದ್ದಾಗ, ಪ್ರೀತಿ ಇತರರೊಂದಿಗೆ ನಿಧಾನವಾಗಿ ವ್ಯವಹರಿಸುತ್ತದೆ ಮತ್ತು ವಿವೇಚನೆಯಿಂದ ದುರ್ಬಲನನ್ನು ಸರಿಪಡಿಸುತ್ತದೆ. ವೈಯಕ್ತಿಕವಾಗಿ ದುಷ್ಟತೆಯಿಂದ ಪ್ರಭಾವಿತವಾಗಿದ್ದರೂ ಸಹ ಪ್ರೀತಿ ದುಷ್ಟತೆಯ ಬಗ್ಗೆ ಯಾವುದೇ ದಾಖಲೆಯನ್ನಿಡುವುದಿಲ್ಲ. ತನ್ನದೇ ಆದ ಕ್ರೈಸ್ತನ ಹೃದಯದಲ್ಲಿರುವ ಮನೋಭಾವವನ್ನು ಆಧರಿಸಿ ಒಬ್ಬರು ಪ್ರೀತಿಸುವುದಿಲ್ಲ. ಕ್ರಿಸ್ತನ ಅನುಕರಣೆಯಲ್ಲಿ ಬದುಕುವುದು ಪ್ರೀತಿ.

**ವಚನ 6.** ಪ್ರೀತಿ **ಅನ್ಯಾಯವನ್ನು ನೋಡಿ ಸಂತೋಷಪಡುವದಿಲ್ಲ**. ಒಬ್ಬನು ಪ್ರೀತಿ ಮಾಡುವಾಗ, ಇತರರಿಗೆ ಅಥವಾ ತನಗೆ ಮಾಡಿದ ತಪ್ಪುಗಳನ್ನು ಎತ್ತಿ ತೋರಿಸುವದರಲ್ಲಿ ಆನಂದಿಸುವದಿಲ್ಲವಿಶೇಷವಾದ ವಿಧದ ಸ್ವ ನೀತಿವಂತನ ತಿರಸ್ಕಾರವು ಇತರರು ಏನು.

ಹೇಳುತ್ತಾರೆ ಅಥವಾ ಏನು ಮಾಡುತ್ತಾರೆ ಎಂಬ ಕಾಲ್ಪನಿಕ ವ್ಯಕ್ತಪಡಿಸುವಿಕೆಯ ಅಘಾತದಿಂದ ಬರುತ್ತವೆ. ಇಂಥಹ ಆತ್ಮನು ವ್ಯಕ್ತಿಯನ್ನು ತನ್ನ ಸ್ವಂತ ಶ್ರೇಷ್ಠತೆಯಲ್ಲಿ .ತೃಪ್ತಿಯನ್ನು ಹೊಂದಲು ವ್ಯಕ್ತಿಯನ್ನು ಅನುಮತಿಸುತ್ತಾನೆ

ಪ್ರೀತಿಯು **ಅನ್ಯಾಯವನ್ನು ನೋಡಿ ಸಂತೋಷಪಡದೇ**, ಸತ್ಯಕ್ಕೆ ಜಯವಾಗುವದಲ್ಲಿ ಸಂತೋಷಪಡುತ್ತದೆ. ಒಬ್ಬ ಕ್ರೈಸ್ತನ ಸ್ವಯೋಗ್ಯತೆ ಕ್ರಿಸ್ತನಲ್ಲಿ ನಿರಂತರವಾಗಿ ಬೆಳೆಯುವದರ ಮೂಲಕ ಬರುತ್ತದೆ, ಬೇರೆಯವರಲ್ಲಿ ಕೆಟ್ಟತನವನ್ನು ನೋಡುವದರಿಂದಲ್ಲ. ಯಾರು ಪ್ರೀತಿಸುತ್ತಾರೊ ಅವರು ಸತ್ಯವನ್ನು ಹುಡುಕುತ್ತಾರೆ. ಸತ್ಯವನ್ನು ಹುಡುಕುವದು ಅನೀತಿವಂತಿಕೆಯನ್ನು ಜ್ಞಾನಕ್ಕೆ ನಡೆಸುವುದಾದರೆ, ಸತ್ಯಕ್ಕಾಗಿ ನಿಂತುಕೊಳ್ಳುವ ಸಂದರ್ಭ ಇದಾಗಿದೆ ಆಡಿಕೊಳ್ಳುವದಕ್ಕಲ್ಲ ಅಥವಾ ಸ್ವಪ್ರಯೋಜನವನ್ನು ಹುಡುಕುವದಕ್ಕೆ ಅಲ್ಲ.

ಪೌಲನು ತಾನು ಏನು ಹೇಳುತ್ತಾನೋ ಅದರ ಮೂಲಕವಾಗಿ ಮಾತ್ರ ಪ್ರೀತಿಯನ್ನು ವ್ಯಾಖ್ಯಾನಿಸುತ್ತಿಲ್ಲ. ಆದರೆ ಅವನು ತನ್ನ ದಿನಗಳಲ್ಲಿ ಜನಪ್ರಿಯವಾಗಿದ್ದ ಕೆಲವು ವ್ಯಾಖ್ಯಾನಗಳನ್ನು ಉದ್ದೇಶಪೂರ್ವಕವಾಗಿ ದೂರವಿರಿಸಿದ್ದಾನೆ. ಉದಾಹರಣೆಗೆ, ನೈತಿಕರಲ್ಲಿ ಪೌಲನ ಸಮಕಾಲೀನರಾಗಿದ್ದವರಲ್ಲಿ, ಮಾನಸಿಕವಾಗಿ ಅಥವಾ ಭಾವನಾತ್ಮಕವಾಗಿ ಅತ್ಯಂತ ಹೆಚ್ಚಿನ ಬೆಲೆಯುಳ್ಳ ಮಾನಸಿಕ ಸ್ಥಿತಿ εὐδαιμονία (*eudaimonia*, “well-being, happiness”) ಆಗಿತ್ತು. ಈ ಕಲ್ಪನೆಯನ್ನು ಪೌಲನು ಉದಾಸೀನಮಾಡುತ್ತಾನೆ. ಅಪೊಸ್ತಲನಿಗೆ, ಕ್ರಿಸ್ತನ ಮೂಲಕ ದೇವರೊಂದಿಗಿರುವ ಸಂಬಂಧದೊಂದಿಗೆ ಬೆಳೆಯುವ ಸಂತೋಷವು, ಅಂತರಂಗದಲ್ಲಿರುವ ತೃಪ್ತಿಯಾಗಿದೆ ಮತ್ತು ತನ್ನಲ್ಲಿ ಸಮಾಧಾನವಾಗಿದೆ, ಅದು ಸಂತೋಷಕ್ಕಿಂತ ಹೆಚ್ಚಿನ ಬೆಲೆಯನ್ನು ನೀಡುವದಾಗಿದೆ ಅದು ಯಾವ ಯಾವ ಹೊರಗಿನ ಪರಿಸ್ಥಿತಿಗಳ ತಮ್ಮನ್ನು ಇರಿಸಿಕೊಳ್ಳುತ್ತಾರೋ ಅವುಗಳ ಮೂಲಕ ಬರುತ್ತವೆ ಮತ್ತು ಹೋಗುತ್ತವೆ.

**ವಚನ 7. ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ.** ಇನ್ನೂ ನಾಲ್ಕು ಸಕಾರಾತ್ಮಕಗಳನ್ನು ಸೇರಿಸಿಕೊಳ್ಳುವದರ ಮೂಲಕ ಪೌಲನು ತನ್ನ ಓದುಗರಿಗೆ ಪ್ರೀತಿಯು “ಅಡಗಿಸಿಕೊಳ್ಳುತ್ತದೆ,” “ನಂಬುತ್ತದೆ,” “ನಿರೀಕ್ಷಿಸುತ್ತದೆ” ಮತ್ತು “ಸಹಿಸಿಕೊಳ್ಳುತ್ತದೆ,” ಯಾರು ಪ್ರೀತಿಸುತ್ತಾರೊ ಅವರು ಇತರರ ವಯಕ್ತಿಕ ತಪ್ಪುಗಳನ್ನು ಮತ್ತು ವಿಫಲತೆಗಳನ್ನು ಉದರತೆಯಿಂದ ದೃಷ್ಟಿಸುತ್ತಾರೆ (ನೋಡಿರಿ 1 ಪೇತ್ರ 4:8). ಅನುಮಾನದಿಂದಾಗುವ ಪ್ರಯೋಜನಗಳನ್ನು ನೀಡುವದಕ್ಕೆ ಕೂತೂಹಲವುಳ್ಳದ್ದಾಗಿರುತ್ತದೆ. ಕೊಲೆಮಾಡುವವರು, ಸುಳ್ಳು ಹೇಳುವವರು ಅಥವಾ ಕಳ್ಳತನ ಮಾಡುವವರು ಮಾತ್ರ ಈ ಲೋಕದಲ್ಲಿ ಪಾಪಿಗಳಲ್ಲಿ ಎಂಬುದನ್ನು ಕಂಡುಕೊಳ್ಳುವಲ್ಲಿ ಸೂಕ್ಷ್ಮವಾಗಿ ವೀಕ್ಷಿಸುತ್ತದೆ. ಪ್ರೀತಿಸಲ್ಪಡುವವರು ಮತ್ತು ಗೌರವಿಸಲ್ಪಡುವವರು ಕೆಲವು ಸಾರಿ ಕ್ಷುಲಕತನ, ಕಹಿಭಾವನೆ ಅಥವಾ ಸ್ವ-ಸೇವೆಯ ಉದ್ದೇಶಗಳ ವಿರುದ್ಧವಾಗಿ ಹೋರಾಟಮಾಡುತ್ತಾರೆ. ಪ್ರೀತಿಯು ಕ್ರೈಸ್ತರು ಇತರರ ತಪ್ಪುಗಳ ಕುರಿತು ಮೃದುವಾಗಿರಬೇಕೆಂದು ಕರೆ ನೀಡುತ್ತದೆ. ಉತ್ತಮವಾದ ಮತ್ತು ಉದಾರತೆಯ ಗುಣಲಕ್ಷಣಗಳು ಜನರಲ್ಲಿ ಕೆಲವೊಮ್ಮೆ ಬಲಹೀನ ಆಯ್ಕೆಯತ್ತ ನಡೆಸುತ್ತಿವೆ. ಇವೆಲ್ಲವುಗಳೂ ತಪ್ಪುಗಳನ್ನು ಉದಾಸೀನ ಮಾಡುವದು ಪ್ರೀತಿಯ ರಹಸ್ಯವಾಗಿದೆ ಎಂದರ್ಥವಲ್ಲ. ಕ್ರೈಸ್ತರು ಪಾಪಮಾಡುವದನ್ನು ಬಿಟ್ಟು

ಉತ್ತಮವಾದ ಕಾರ್ಯಗಳನ್ನು ಮಾಡಬೇಕು ಆದರೆ ಕ್ರಿಸ್ತನಲ್ಲಿ ದೀಕ್ಷಾಸ್ನಾನವು ಮನುಷ್ಯನ ಹೃದಯದಲ್ಲಿರುವ ಪ್ರತಿಯೊಂದು ಪಾಪಮಯ ವರ್ತನೆಯನ್ನು ಕ್ರೂಜೆಗೆ ಹಾಕುತ್ತದೆ ಎಂದಲ್ಲ. ಸಹೋದರರೇ, ನೀವು ಪ್ರೀತಿಸುವವರು ಮತ್ತು ಗೌರವಿಸುವರು ಮಾಡುವ ಸಂತೋಷಕರವಲ್ಲದ ಆಯ್ಕೆಯನ್ನು ನೀವು ಎದುರಿಸುವಾಗ ಚಂಚಲಚಿತ್ತರಾಗಬೇಡಿರಿ. ಕರ್ತನ ಸಭೆಯ ಸದಸ್ಯರು ಅವಶ್ಯವಿದ್ದಲ್ಲಿ ಒಬ್ಬರನ್ನೊಬ್ಬರು ತಿದ್ದುವವರಾಗಿರಿ; ಇದನ್ನು ಮಾಡುವಲ್ಲಿ ವಿಫಲರಾಗುವದು ಹೇಡಿತನವಾಗಿದೆ. ಪೌಲನು ಗದರಿಸುವದು ಮತ್ತು ತಿದ್ದುವದು ತನ್ನ ಪೋಷಣೆಯ ಭಾಗವಾಗಿದೆ ಮತ್ತು ತಾನು ಪ್ರೀತಿಸುವವರ ಕುರಿತು ಕಳಕಳಿಯಾಗಿದೆ ಎಂದು ನೋಡುತ್ತಾನೆ.

ಕ್ರೈಸ್ತರು ಉದಾಸೀನತೆ ಅಥವಾ ಹಿಂಸೆ ಅಥವಾ ಅಪ್ರಾಮಾಣಿಕತೆಯನ್ನು ಎದುರಿಸುತ್ತಾರೋ, ಪ್ರೀತಿಯ ಬೇಡಿಕೆಗಳು ಅವನನ್ನು ಮೃದುವಾಗಿ ಕಾರ್ಯತತ್ಪರನಾಗಲು ಮತ್ತು ಪಶ್ಚಾತ್ತಾಪದ ಬೇಡಿಕೆಯನ್ನು ನೀಡಲು ಒತ್ತಾಯಪಡಿಸುತ್ತವೆ. ಮರೆತು ಹೋದ ಪತ್ರ ಎಂದು ಹೇಳುವ ಯೂದನ ಪತ್ರಿಕೆ ಹೆಳುತ್ತದೆ, “ಸಂದೇಹಪಡುವ ಕೆಲವರಿಗೆ ಕರುಣೆಯನ್ನು ತೋರಿಸಿರಿ, ಅವರನ್ನು ಬೆಂಕಿಯ ಬಾಯೊಳಗಿಂದ ಎಳಕೊಂಡು ರಕ್ಷಿಸಿರಿ, ಕೆಲವರನ್ನು ಭಯಯುಕ್ತರಾಗಿ ಕರುಣಿಸಿರಿ; ಹೊಲಸು ನಡತೆಯಿಂದ ಮೈಲಿಗೆಯಾದ ಅವರ ಅಂಗಿಯನ್ನೂ ಅಸಹ್ಯಿಸಿರಿ” (ಯೂದನು 22, 23). ಪ್ರೀತಿಯ ಮೊದಲನೆಯ ಒಲವು ಸಹೋದರನನ್ನು ನಂಬುವದು, ಅವನು ಮಾತನಾಡುವದು ಸತ್ಯ ಎಂದು ಕಲ್ಪಿಸುವದು, ಅವನಲ್ಲಿ ಉತ್ತಮವಾದದ್ದನ್ನು ನೋಡುವದಕ್ಕೆ ಬಯಸುವದು ಮತ್ತು ಅವನಲ್ಲಿರುವ ಉತ್ತಮವಾದದ್ದನ್ನು ಕಂಡುಕೊಳ್ಳುವದು. ಎಚ್ಚರಿಕೆಯ ಕುರಿತು ಸಹೋದರನ್ನು ಎದುರಿಸುವದು ಬಂದಿರುವಾಗ, ಅವನಿಗಿಂತ ಶ್ರೇಷ್ಠರಾಗಿ ಕಾಣುವದಕ್ಕೆ ಗದರಿಸುವದು ಎಂದಿಗೂ ಉದ್ದೇಶವಲ್ಲ.

## ಪ್ರೀತಿಯ ಶಾಶ್ವತತೆ (13:8-12)

**8ಪ್ರೀತಿಯು ಎಂದಿಗೂ ಬಿದ್ದುಹೋಗುವದಿಲ್ಲ; ಪ್ರವಾದನೆಗಳಾದರೋ ಇಲ್ಲದಂತಾಗುವವು; ವಾಣಿಗಳೋ ನಿಂತುಹೋಗುವವು; ವಿದ್ಯೆಯೋ ಇಲ್ಲದಂತಾಗುವದು.**
**9ಅಪೂರ್ಣವಾಗಿ ತಿಳುಕೊಳ್ಳುತ್ತೇವೆ. ಅಪೂರ್ಣವಾಗಿ ಪ್ರವಾದಿಸುತ್ತೇವೆ. 10ಆದರೆ**
**ಸಂಪೂರ್ಣವಾದದ್ದು ಬಂದಾಗ ಅಪೂರ್ಣವಾದದ್ದು ಇಲ್ಲದಂತಾಗುವದು. 11ನಾನು**
**ಬಾಲಕನಾಗಿದ್ದಾಗ ಬಾಲಕನ ಮಾತುಗಳನ್ನಾಡಿದೆನು. ಬಾಲಕನ ಸುಖ ದುಃಖಗಳನ್ನು ಅನುಭವಿಸಿದೆನು, ಬಾಲಕನ ಆಲೋಚನೆಗಳನ್ನು ಮಾಡಿಕೊಂಡನು. ಪ್ರಾಯಸ್ಥನಾದ ಮೇಲೆ**
**ಬಾಲ್ಯದವುಗಳನ್ನು ಬಿಟ್ಟು ಬಿಟ್ಟೆನು. 12ಈಗ ಕಂಚಿನ ದರ್ಪಣದಲ್ಲಿ ಕಾಣಿಸುವಂತೆ [ದೇವರ ಮುಖವು] ನಮಗೆ ಮೊಬ್ಬಾಗಿ ಕಾಣಿಸುತ್ತದೆ; ಆಗ ಮುಖಾಮುಖಿಯಾಗಿ ಆತನನ್ನು ನೋಡುವೆವು. ಈಗ ಸ್ವಲ್ಪಮಾತ್ರ ನನಗೆ ತಿಳಿದದೆ; ಆಗ ದೇವರು ನನ್ನನ್ನು ಸಂಪೂರ್ಣವಾಗಿ ತಿಳುಕೊಂಡಂತೆ ನಾನು ಸಂಪೂರ್ಣವಾಗಿ ತಿಳುಕೊಳ್ಳುವೆನು.**

ಪೌಲನು ಅಸ್ವಾಭಾವಿಕ ವರಗಳನ್ನು ಹೊಂದಿಕೊಳ್ಳುವದಕ್ಕಿಂತ ಪ್ರೀತಿಯು ಶ್ರೇಷ್ಠವಾಗಿದೆ ಎಂಬುದನ್ನು ಪೌಲನು ವಾದಿಸುತ್ತಾನೆ. ಇದು “ಪ್ರೀತಿಯ ಉತ್ಕೃಷ್ಟವಾದ

ಮಾರ್ಗ" (12:31). ನಿಜವಾಗಿಯು, ಅಸ್ವಾಭಾವಿಕವಾದ ಆಶೀರ್ವಾದಗಳ ವರ ಪ್ರೀತಿಯನ್ನು ತಡೆಹಿಡಿಯುವದಿಲ್ಲ; ಒಂದೇ ವ್ಯಕ್ತಿಯಲ್ಲಿ ಎರಡು ಜೊತೆಯಾಗಿ ವಾಸಿಸುತ್ತವೆ, ಹಾಗೂ, ಕೊರಿಂಥದಲ್ಲಿ ಅಸಾಮಾನ್ಯವಾದ ಆತ್ಮೀಕ ವರಗಳು ಯಾವ ರೀತಿಯಲ್ಲಿ ಹಂಚಲ್ಪಟ್ಟಿದ್ದವು ಮತ್ತು ಪ್ರಾಯೋಗಿಕವಾಗಿದ್ದವು ಎಂದರೆ ಪ್ರೀತಿಯ ಪ್ರಕಟಿಸುವಿಕೆ ಅಲ್ಲಿ ಇರಲಿಲ್ಲ. ಪ್ರೀತಿಯ ಬೆಲೆಯನ್ನು ನಿವೇದಿಸಲು, ಅಪೊಸ್ತಲನು ಕೊರಿಂಥದ ವಿಶ್ವಾಸಿಗಳಲ್ಲಿ ಕೆಲವರು ಆನಂದಿಸುತ್ತಿರುವ ಮಹತ್ಕಾರ್ಯಗಳ ವರಗಳಿಗಿಂತ ಪ್ರೀತಿಯು ಶ್ರೇಷ್ಠವಾಗಿದೆ ಎಂದು ತಿಳಿಸುವದಕ್ಕಾಗಿ ಇತರ ಕಾರಣಗಳಿಗೆ ತಿರುಗಿಕೊಳುತ್ತಾನೆ. ಪ್ರೀತಿಯು ಕ್ರೈಸ್ತರ ಜೀವಿತದ ಕೇಂದ್ರ ಗುಣಲಕ್ಷಣವಾಗಿದೆ; ಹೋಲಿಕೆಯಲ್ಲಿ ಅನ್ಯಭಾಷೆಯನ್ನು ಮಾತಾಡುವದು, ಸ್ವಸ್ಥಪಡಿಸುವದು ಜ್ಞಾನ ಮತ್ತು ಪ್ರವಾದನೆ ಕೇವಲ ಯೇಸುವಿನ ಜೀವಿತದ ಕುರಿತು ಬೋಧನೆಯನ್ನು ಮಾಡಲು ಉಪಯೋಗಿಸುವ ತಾತ್ಕಾಲಿಕವಾದ ವರಗಳಾಗಿವೆ. ಪ್ರೀತಿಯು ಎಂದಿಗೂ ಬಿದ್ದುಹೋಗುವದಿಲ್ಲ, ಆದರೆ ಮಹತ್ಕಾರ್ಯಗಳನ್ನು ಮಾಡುವ ವರಗಳು ಬಿದ್ದುಹೋಗಬಹುದು.

**ವಚನ 8.** ಪ್ರೀತಿಯು ಎಂದಿಗೂ ಬಿದ್ದುಹೋಗುವದಿಲ್ಲ ಎಂದು ದೃಢಪಡಿಸಿ, (οὐδέποτε πίπτει, *oudepote piptei*, literally, "never falls"), ಅಪೊಸ್ತಲನು ಬದಲಾಗದ ಪ್ರೀತಿಯ ಶಾಶ್ವತತೆಗೆ ಒತ್ತು ನೀಡುತ್ತಾನೆ. ಇಲ್ಲಿ ನಾವು ಮೊದಲನೆಯ ಶತಮಾನದ ಮಹತ್ಕಾರ್ಯಗಳ ಪ್ರಕಟನೆಯ ತಾತ್ಕಾಲಿಕ ಸ್ವರೂಪವನ್ನು ನೋಡುತ್ತೇವೆ.

ಪೌಲನು ಕೊರಿಂಥದ ಕ್ರೈಸ್ತರು ನೇರವಾಗಿ ಪವಿತ್ರಾತ್ಮನ ಆಶೀರ್ವಾದದಿಂದ ಹೊಂದಿಕೊಂಡಿರುವ ಮೂರು ವಿಶಿಷ್ಟವಾದ ವರಗಳ ಪ್ರಕಟನೆಯ ಪ್ರೀತಿಯೊಂದಿಗೆ ವ್ಯತ್ಯಾಸವನ್ನು ತೋರಿಸುತ್ತಾನೆ: "**ಪ್ರವಾದನೆ, ವಾಣಿಗಳನ್ನಾಡುವದು ಮತ್ತು ಜ್ಞಾನ.**" ಇದರಲ್ಲಿ ಎರಡು ಪ್ರವಾದನೆ ಮತ್ತು ಜ್ಞಾನ, ಅವು ಬಿದ್ದುಹೋಗಬಹುದು (καταργηθήσεται, *katargēthēsetai*, a future passive of καταργέω, *katargeō* "to nullify, to cancel") ಎಂದು ಹೇಳುತ್ತಾನೆ, ಇದರ ನಿಷ್ಕ್ರೀಯ ಭವಿಷ್ಯತ್ತಕಾಲ ಇದರೊಟ್ಟಿಗೆ, ಪೌಲನು ಹೇಳುತ್ತಾನೆ ವಾಣಿಗಳು ಬಿದ್ದುಹೋಗುತ್ತವೆ, (παύσονται, *pausontai*, ಭವಿಷ್ಯತ್ತಿನ ಮಧ್ಯದ παύω, *pauō*). ಅವನು ಮೂಲತಃ ವಾಣಿಗಳ ಜ್ಞಾನ ಮತ್ತು ಪ್ರವಾದನೆಯ ವಿಷಯದಲ್ಲಿ ಈ ಮೊದಲು ಹೇಳಿರುವದನ್ನೇ ಹೇಳುತ್ತಾನೆ. ಈ ಎರಡೂ ಸಂದರ್ಭಗಳಲ್ಲಿ, ಈ ವಚನದಲ್ಲಿ ಪ್ರೀತಿಯ ಶಾಶ್ವತತೆ ಮೂರು ಮಹತ್ಕಾರ್ಯಗಳನ್ನು ಮಾಡುವ ವರಗಳ ಸ್ವರೂಪಕ್ಕೆ ವ್ಯತ್ಯಾಸವಾಗಿ ನಿಂತುಕೊಳ್ಳುತ್ತವೆ.

ಪ್ರೀತಿಯನ್ನು ನೀಡುವ ಅಥವಾ ಪ್ರೀತಿಯನ್ನು ಹೊಂದಿಕೊಳ್ಳುವ ಒಬ್ಬನಾದರೂ ಬಿದ್ದುಹೋಗುವದಿಲ್ಲ. ಮಹತ್ಕಾರ್ಯಗಳನ್ನು ಮಾಡುವ ವರಗಳು ಆಯ್ದವರಿಗೆ ಕೊಡಲ್ಪಡುತ್ತವೆ, ಪ್ರೀತಿಯು ಎಲ್ಲರಿಗೂ ಲಭ್ಯವಾಗಿದೆ. ಇದಕ್ಕೆ ಆತ್ಮನ ಅಸ್ವಾಭಾವಿಕವಾದ ಆಶೀರ್ವಾದಗಳ ಅಗತ್ಯತೆ ಇಲ್ಲ. ಹೆಚ್ಚಾಗಿ ಬಯಸುವ ಆತ್ಮೀಕ ವರಗಳನ್ನು ಹೊಂದಿಕೊಳ್ಳುವದಕ್ಕಿಂದ ಪ್ರೀತಿಯನ್ನು ಹೊಂದಿಕೊಳ್ಳುವದು ಬಹಳ ಪ್ರಾಮುಖ್ಯವಾಗಿದೆ. ಯಾಕಂದರೆ ಇದರ ತಳಹದಿಯ ಮೇಲೆ ಕ್ರಿಸ್ತೀಯ ನೈತಿಕತೆ ಮತ್ತು ಮೌಲ್ಯಗಳು ಕಟ್ಟಲ್ಪಟ್ಟಿವೆ. ಪ್ರೀತಿಯಲ್ಲದೇ ಆತ್ಮೀಕ ವರಗಳು ನಿರರ್ಥಕವಾಗಿವೆ. ಪ್ರೀತಿಯ ಅಗತ್ಯತೆಗಳನ್ನು ಒಬ್ಬನು ಮರೆಯಬಹುದು ಅಥವಾ ಇದ್ದ ಪರಿಸ್ಥಿತಿಯಲ್ಲಿ ಅವುಗಳನ್ನು

ಸರಿಯಾಗಿ ಅಳವಡಿಸಿಕೊಳ್ಳದೇ ಹೋಗಬಹುದು, ಆದರೆ ಪ್ರೀತಿ ಸಭೆಯ ಜೀವಿತಕ್ಕೆ ತಳಹದಿಯಾಗಿದೆ. ಪೌಲನು ಪ್ರವಾದನೆ, ವಾಣಿಗಳನ್ನಾಡುವದು, ಜ್ಞಾನ ಇದರ ತಪ್ಪಾದ ಅರ್ಥವನ್ನು ನೀಡುತ್ತಿಲ್ಲ, ಅವನು ಈಗಾಗಲೇ ತನ್ನ ಓದುಗರಿಗೆ "ಅವುಗಳನ್ನು ತವಕದಿಂದ ಬಯಸಿರಿ" ಎಂದು ಹೇಳಿದ್ದಾನೆ (12:31). ಹಾಗೂ, ಅವನು ಕೊರಿಂಥದವರು ದೇವರ ರಾಜ್ಯದ ಜನರಾಗುವದಕ್ಕಾಗಿ ತಪ್ಪಾದ ಮಾರ್ಗವನ್ನು ಹಿಡಿದಿದ್ದಾರೆ. ಅಪೊಸ್ತಲನು ಸಭೆಯ ಆತ್ಮೀಕ ಕೇಂದ್ರವನ್ನೇ ತಿನ್ನುತ್ತಿರುವ ಸ್ಪರ್ಧಾತ್ಮಕ ಆತ್ಮನಿಗೆ ತಡೆಯನ್ನು ನೀಡುವದಕ್ಕೆ ಪ್ರಯತ್ನಿಸುತ್ತಿದ್ದಾನೆ.

**ವಚನ 9.** ಪ್ರೀತಿಯನ್ನು ಹೋಲಿಸುವಾಗ, 13:8ರಲ್ಲಿರುವ ಮಹತ್ಕಾರ್ಯದ ವರಗಳು ಭಾಗಶಃ ಮಾತ್ರ ಇವೆ. ಬಾಲ ಸಭೆಯ ಕಾಲದಲ್ಲಿ, ಅವರು ಸಂಪೂರ್ಣವಾದ ಪ್ರಕಟನೆ ದೊರೆಯುವರೆಗೆ ಒಂದು ಪ್ರಾಮುಖ್ಯವಾದ ಉದ್ದೇಶಕ್ಕಾಗಿ ಸೇವೆ ಮಾಡಿದರು. ಜ್ಞಾನದಷ್ಟೇ ಸಭೆಯನ್ನು ಕಟ್ಟುವದಕ್ಕೆ ಪ್ರಾಮುಖ್ಯವಾದದ್ದು ಪ್ರವಾದನೆ. ಅವುಗಳ ಶಾಶ್ವತವಾದ ಗುಣಲಕ್ಷಣದಿಂದಾಗಿ ಅವು ತಳಹದಿಯಾಗಿದಲ್ಲ. ಪ್ರೀತಿಯು ಈ ಕಾಲಕ್ಕೆ ಮತ್ತು ಬರಲಿಕ್ಕಿರುವ ಕಾಲಕ್ಕೆ ಅವಶ್ಯವಾಗಿದೆ. ಅದ್ಭುತವಾದ ಜ್ಞಾನ ಮತ್ತು ಪವಿತ್ರಾತ್ಮನಿಂದ ದೊರೆಯುವ ಪ್ರವಾದನೆ ವರಗಳು, ಭಾಗಶಃ ಮಾತ್ರ ಕಾರ್ಯಮಾಡಿದಾಗ್ಯೂ. ಪೌಲನು ಹೇಳುತ್ತಾನೆ, **ಅಪೂರ್ಣವಾಗಿ ತಿಳುಕೊಳ್ಳುತ್ತೇವೆ ಅಪೂರ್ಣವಾಗಿ ಪ್ರವಾದಿಸುತ್ತೇವೆ.** ದೇವರು ಕ್ರೈಸ್ತರಿಗೆ ಪ್ರೀತಿಸುವ ಸಾಮರ್ಥ್ಯವನ್ನು ನೀಡಿದ್ದಾನೆ ಇಲ್ಲಿಯವರೆಗೆ ದೇವ ಜನರಾಗಿ ನಮ್ಮಲ್ಲಿ ಪ್ರೀತಿಯು ನೆಲೆಸುವವರೆಗೆ, ಈ ಗುಣಲಕ್ಷಣವು ನಮಗೆ ಸಂಬಂಧಿಸಿದ್ದಾಗಿದೆ; ನಾವು ಪ್ರೀತಿಸುವ ಹಂತದವರೆಗೆ, ನಾವು ದೇವರಂತಾಗುತ್ತೇವೆ. ಆದುದರಿಂದ, ಯಾರು ಕ್ರಿಸ್ತನ ಪ್ರೀತಿಯಿಂದ ತುಂಬಲ್ಪಡುತ್ತಾರೋ ಅವರು ತನ್ನನ್ನು ತಾನು ಅಲ್ಲಗಳೆದು ಇನ್ನೊಬ್ಬರ ಒಳಿತಿಗಾಗಿ ಕಾರ್ಯಮಾಡಲು ಸಾಧ್ಯ.

**ವಚನ 10.** ಪೌಲನು ಈಗಾಗಲೇ ಇದನ್ನು ಸ್ಥಾಪಿಸಿದ್ದಾನೆ, ಪ್ರೀತಿಯು ಶಾಶ್ವತವಾಗಿ ಇರುವಾಗ ಮಹತ್ಕಾರ್ಯಗಳನ್ನು ಮಾಡುವ ಆತ್ಮನ ವರಗಳು ಇರುವದಿಲ್ಲ. ಯಾಕಂದರೆ ಇವು ಕೊನೆಗೊಳ್ಳುತ್ತವೆ, ಕೊರಿಂಥದ ಕ್ರೈಸ್ತರು ದೇವರು ತಮಗೆ ನೀಡಿರುವ ಗುಣಲಕ್ಷಣಗಳ ಮೂಲಕ ಒಳ್ಳೇದನ್ನು ಮಾಡುವವರಾಗಿದ್ದಾರೆ. ಪ್ರೀತಿಯು ಅವರಿಗೆ ನೀಡಿದ ಸ್ವಾಭಾವಿಕವಾದ ಆಶೀರ್ವಾದಗಳು ಮತ್ತು ಆತ್ಮನು ದೇವರ ಮಹಿಮೆಗಾಗಿ ಅವರಿಗೆ ನೀಡಿರುವ ವಿಶೇಷವಾದ ವರಗಳನ್ನು ತನ್ನ ರಾಜ್ಯವನ್ನು ಕಟ್ಟುವದಕ್ಕಾಗಿ ಉಪಯೋಗಿಸಲು ಪ್ರೇರೇಪಣೆಯನ್ನು ನೀಡುತ್ತಾನೆ. ಪೌಲನು ಸಂಪೂರ್ಣವಾದದ್ದು ಅಪೂರ್ಣವಾದದ್ದು ಇಲ್ಲದಂತಾಗುವದು ಎಂದು ಹೇಳುವಾಗ ಆತನು ಖಚಿತವಾಗಿ ದೃಢಪಡಿಸುತ್ತಿದ್ದಾನೆ. ಅವನು ಅವರು ಪ್ರೀತಿಯ ಶ್ರೇಷ್ಠತೆಯನ್ನು ನೋಡಬೇಕೆಂದು ಬಯಸುತ್ತಾನೆ. "ಅಪೂರ್ಣವಾದ" ವರಗಳು, ಕೊರಿಂಥದವರಿಂದ ಹೆಚ್ಚಿನ ಎಲೆಯನ್ನು ಹೊಂದಿದವುಗಳು ಸಂಪೂರ್ಣವಾದದ್ದು ಬಂದಾಗ ಇಲ್ಲದಂತಾಗುವವು ಎಂಬುದನ್ನು ತಿಳಿದುಕೊಂಡಿದ್ದರು. (ನೋಡಿರಿ ಮುಂದಿನ ಅಧ್ಯಯನಕ್ಕಾಗಿ: "ಪರಿಪೂರ್ಣವದದ್ದು ಯಾವದು"? ಪುಟ 122ರಲ್ಲಿ.)

**ವಚನ 11.** "ಅಪೂರ್ಣವಾದದ್ದು" ಮತ್ತು "ಪರಿಪೂರ್ಣವಾದದ್ದು" ಇವುಗಳ ಮಧ್ಯದಲ್ಲಿರುವ ವ್ಯತ್ಯಾಸವನ್ನು ಕಂಡುಕೊಳ್ಳಲಾಗಿದೆ. ಕೆಲವು "ಪರಿಪೂರ್ಣವಾದದ್ದು"

ಎಂದರೆ ಪ್ರೀತಿಯ ಕಲ್ಪನೆಯಲ್ಲಿ ಸಶರೀರವಾಗಿ ಪ್ರಭುದ್ದ ಕ್ರೈಸ್ತರಾಗಿ ಜೀವಿಸುವದು, ಇದರೊಟ್ಟಿಗೆ ಸಂಬಂಧಿಸಿದ "ಅಪೂರ್ಣವಾದ" ಮಹತ್ಕಾರ್ಯಗಳ ವರಗಳ ಸಾಕ್ಷಿಯು ಅದೃಶ್ಯವಾಗುವದರ ಮಧ್ಯದಲ್ಲಿರುವ ಹೋಲಿಕೆಯನ್ನು ನಿರ್ವಹಿಸುವದು. ಅವರು 13:11ರಲ್ಲಿ ಇದಕ್ಕೆ ಬೆಂಬಲವನ್ನು ಕಂಡುಕೊಳ್ಳುತ್ತಾರೆ. ಪೌಲನು **ನಾನು ಪ್ರಾಯಸ್ಥನಾದ ಮೇಲೆ ಬಾಲ್ಯದವುಗಳನ್ನು ಬಿಟ್ಟುಬಿಟ್ಟೆನು** ಎಂದು ಬರೆಯುತ್ತಾನೆ. ಹ್ಯಾಫೂ, ಪೌಲನ ಉದಾಹರಣೆ "ಪರಿಪೂರ್ಣತೆಯ" ಕೆಲವು ಉದಾಹರಣೆಗಳನ್ನು ವಿವರಿಸುವದಿಲ್ಲ. ಒಬ್ಬನು "ಪರಿಪೂರ್ಣತೆಯ" ಕುರಿತು ಏನನ್ನು ನಿರ್ಧರಿಸುತ್ತಾನೋ ಅದು ಸಮಾನವಾಗಿ ನ್ಯಾಯಸಮ್ಮತವಾಗಿ ಎಂಬುದು ವೀಕ್ಷಣೆಯ ಒತ್ತಡವಾಗಿದೆ. ಅಪೊಸ್ತಲನು ಅಪೂರ್ಣವಾದ ಸಂಗತಿಗಳಿಗೆ. ಅಥವಾ ಮಹತ್ಕಾರ್ಯಗಳ ವರಕ್ಕೆ ಕೊನೆಯಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ಪರಿಪೂರ್ಣವಾದದ್ದು ಬರುವಾಗ, ಕ್ರೈಸ್ತರು ಅಪೂರ್ಣವಾದ ಸಂಗತಿಗಳಿಗೆ ಎಂದಿಗೂ ಆತುಕೊಳ್ಳುವದಿಲ್ಲ. ಕೊನೆಗೆ, ನಂಬಿಗಸ್ತರು ಪರಲೋಕದಲ್ಲಿ ದೇವರ ಕೃಪೆಯನ್ನು ಉನ್ನತ ಸ್ಥಾನದಲ್ಲಿ ಆನಂದಿಸುತ್ತಾರೆ.

**ವಚನ 12.** ಮಹತ್ಕಾರ್ಯಗಳನ್ನು ಮಾಡುವ ಸಾಮಥ್ರ್ಯ ಕ್ರಿಸ್ತನಲ್ಲಿ ದೇವರು ನಮಗೆ ನೀಡುವ ವಾಗ್ದಾನದ ಸತ್ಯಕ್ಕೆ ಸಾಕ್ಷಿಯಾಗಿದೆ. ಯಾರು ಇಂದು ತಮ್ಮ ಉಪಸ್ಥಿತಿಗೆ ಒತ್ತು ನೀಡುತ್ತಾರೋ ಅವರು ದೃಶ್ಯವಾದ ಮತ್ತು ಭೌದ್ದಿಕ ದೃಢೀಕರಣವನ್ನು ಬೇಡಿಕೆಯನ್ನು ಇಡುತ್ತಾರೆ. ದೇವರಲ್ಲಿರುವ ನಂಬಿಕೆ ಮಾತ್ರ ಸಾಲದಿರುವಾಗ ಸೂಚಕಕಾರ್ಯಗಳ ಅಗತ್ಯತೆ ಇರುತ್ತದೆ. ಪರಲೋಕ ಸಾಮ್ರಾಜ್ಯದಲ್ಲಿ, ಕ್ರೈಸ್ತರು **ಕನ್ನಡಿಯಲ್ಲಿ** ಕಾಣುತ್ತೇವೋ ಎಮಬಂತೆ ಮೊಬ್ಬಾಗಿ ಕಾಣುವಷ್ಟು ಮಿತಿಯಲ್ಲಿ ಇರುವದಿಲ್ಲ.[11] ಬದಲಾಗಿ ಅವರು ಆತನನ್ನು ಮುಖಾಮುಖಿಯಾಗಿ ನೋಡುತ್ತಾರೆ. ಅಪೋಸ್ತಲನು ಮೋಶೆಗೆ ದೇವರು ಉಪಯೋಗಿಸಿದ ಭಾಷೆಯನ್ನು ಎರವಲು ತೆಗೆದುಕೊಳ್ಳುತ್ತಾನೆ: ನಾನು ಆತನೊಂದಿಗೆ ಮುಖಾಮುಖಿಯಾಗಿ (ಅರಣ್ಯಕಾಂಡ 12:8). ಪರಲೋಕದಲ್ಲಿ ಕರ್ತನೊಂದಿಗೆ "ಮುಖಾಮುಖಿಯಾಗಿ ಮಾತನಾಡುತ್ತೇವೆ" ವಿಮೋಚಕನೊಂದಿಗೆ.

ಅಸಾಮಾನ್ಯ ವರಗಳು ಸಭೆಯಲ್ಲಿರುವ ಅಧಿಕಾರ ಮತ್ತು ಬೋಧನೆಗೆ ಸಂಬಂಧಿಸಿದಂತೆ ವಿಭಿನ್ನ ಉದ್ದೇಶಗಳನ್ನು ಹೊಂದಿವೆ. ಹೊಸ ಒಡಂಬಡಿಕೆಯ ವೇವಾಕ್ಯದ ಪುಸ್ತಕಗಳ ಪಟ್ಟಿ ಈ ವೇದಭಾಗದ ತರ್ಕಬದ್ದವಾದ ನಿರ್ಧಾರವಾಗಿದೆ. ಈ ದೃಷ್ಟಿಕೋನವು ಧಾರ್ಮಿಕ ಉತ್ಸಾಹಿಗಳಿಂದ "ಅದ್ಭುತ" ಎಂದು ಕರೆಯಲಾಗುವವುಗಳು ಇಂದು ನಿರ್ಲಿಪ್ತ ವೀಕ್ಷಕರು ಪರೀಕ್ಷಿಸುವಾಗ ಮೂಡ ನಂಬಿಕೆಯ ಕ್ಷೇತ್ರದಲ್ಲಿ ಬಾಡಿಹೋಗುತ್ತಿವೆ ಎಂದು ಸೂಚಿಸುತ್ತದೆ. ಯಾರು ಅದ್ಭುತಗಳನ್ನು ಮಾಡುವ ಬಲವನ್ನು ಇನ್ನೆಂದಿಗೂ ನೀಡುವದಿಲ್ಲ ಎಂದು ನಂಬುವ ವಯಕ್ತಿಕ ವಿಶ್ವಾಸಿಗಳು ದೇವರು ತನ್ನ ಲೋಕದಲ್ಲಿ ಹೆಜ್ಜೆಯನ್ನಿಟ್ಟಿದ್ದಾನೆ ಎಂದು ನಂಬುವದನ್ನು ಮುಂದುವರೆಸುತ್ತಾರೆ. ಅವನು ಬೇಡಿಕೆಗಳನ್ನು ನೇರವೇರಿಸುತ್ತಾನೆ ಮತ್ತು ತನ್ನ ಜನರ ಪ್ರಾರ್ಥನೆಗಳಿಗೆ ಪಕ್ಷಪಾತವಿಲ್ಲದೆ ಪ್ರತಿಕ್ರಿಯಿಸುತ್ತಾನೆ.

ಮುಂದಿನ ವಚನಗಳಲ್ಲಿ ಪೌಲನ ಕ್ರೈಸ್ತರ ಮೌಲ್ಯಗಳ ಪಟ್ಟಿ ಕೊರಿಂಥದಲ್ಲಿ ಬರಲ್ಲಿರುವ ಆತ್ಮೀಕ ವರಗಳೊದಿಗೆ ಸ್ವರ್ಧೆಯಲ್ಲಿ ವ್ಯತ್ಯಾಸವಾಗಿ ನಿಲ್ಲುತ್ತವೆ.

## ನೆಲೆಯಾಗಿರುವ ಮೌಲ್ಯಗಳು: ನಂಬಿಕೆ, ನಿರೀಕ್ಷೆ ಮತ್ತು ಪ್ರೀತಿ (13:13)

**13ಹೀಗಿರುವದರಿಂದ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತವೆ; ಇವುಗಳಲ್ಲಿ ದೊಡ್ಡದು ಪ್ರೀತಿಯೇ.**

**ವಚನ 13.** ಪೌಲನು ಪ್ರೀತಿಯ ಉತ್ಕೃಷ್ಟವಾದ ಹೇಳಿಕೆಯನ್ನು ನೀಡುವಾಗ ಪ್ರೀತಿಯ ಹೊಗಳಿಕೆಯಲ್ಲಿ ಅಂತಿಮ ಘಟ್ಟವನ್ನು ತಲುಪುತ್ತಾನೆ. **ನಂಬಿಕೆ, ನಿರೀಕ್ಷೆ** ಮತ್ತು **ಪ್ರೀತಿ** ಇವುಗಳು ದೈವೀಕ ಜೀವಿತವನ್ನು ಸನ್ನದಗೊಳಿಸುವ ಸಾಮಾನ್ಯ ವರ್ತನೆಗಳಾಗಿವೆ. ಪೌಲನು ಅವುಗಳನ್ನು ಅನೇಕಾವರ್ತಿ ನ್ಯಾಯವಾಗಿ ಸಾಮಾನ್ಯ ಸಾಂಗತ್ಯದಲ್ಲಿ ಇರಿಸುತ್ತಾನೆ (ರೋಮಾ 5:1-5; ಗಲಾತ್ಯ 5:5, 6; ಕೊಲೊ 1:4, 5:1 ಥೆಸಲೋನಿಕ 1:3; 5:8; ನೋಡಿರಿ ತೀತ 2:2). ಹಾಗೂ, ಅಪೊಸ್ತಲನು ಇಲ್ಲಿ ಮೂರರಲ್ಲಿ ಪ್ರೀತಿ ಎಲ್ಲಕ್ಕಿಂತಲೂ ಪ್ರಾಮುಖ್ಯವಾದದ್ದು ಎಂದು ಹೇಳುತ್ತಾನೆ. ಕೊರಿಂಥದವರು ಈ ಗುಣಲಕ್ಷಣಗಳಲ್ಲಿ ಬೆಳೆಯುತ್ತಿರುವ ಹಾಗೆ ಆತ್ಮನ ಅಸಾಮಾನ್ಯ ವರಗಳ ಪ್ರಯೋಗ (ಪ್ರವಾದನೆ, ವಾಣಿಗಳನ್ನಾಡುವದು ಮತ್ತು ಜ್ಞಾನ) ಕಡಿಮೆ ಪರಿಣಾಮವನ್ನು ಬೀರುತ್ತವೆ. ಮಹತ್ಕಾರ್ಯಗಳ ವರಗಳು ಶ್ರೇಷ್ಠವಾದ ಯೋಗ್ಯತೆಯನ್ನು ಹೊಂದುವದಕ್ಕೆ ಸಿದ್ಧತೆಯಾಗಿವೆ.

ಪ್ರೀತಿಯು ತನ್ನ ಅರ್ಥದ ಆಳದಲ್ಲಿ, ಜನರನ್ನು ದೇವರ ಸ್ವರೂಪದಲ್ಲಿ ರೂಪಿಸುತ್ತದೆ. ಕ್ರೈಸ್ತರ ವರ್ತನೆ ಕ್ರಿಸ್ತನಲ್ಲಿ ಹೊಸ ಜೀವಿತವನ್ನು ನೀಡಿದ ದೇವರ ಗುಣಲಕ್ಷಣಗಳನ್ನು ಪ್ರತಿಬಿಂಬಿಸುತ್ತದೆ.

ಪೌಲನು ಪ್ರೀತಿಯ ತನ್ನ ಹೊಗಳಿಕೆಯನ್ನು ಮೂರು ಅಂಶಗಳಲ್ಲಿ ವಿಭಾಗಿಸುತ್ತಾನೆ. ಮೊದಲನೆಯದಾಗಿ, ಅಪೊಸ್ತಲನು ಪ್ರೀತಿಯು ಅತ್ಯಂತ ಅವಶ್ಯಕ ಎಂಬುದನ್ನು ಪ್ರಕಟಿಸುತ್ತಾನೆ, ಆತ್ಮೀಕ ವರಗಳು ಅಥವಾ ಗುಣಲಕ್ಷಣಗಳು ಪ್ರೀತಿಯಿಲ್ಲದಿದ್ದರೆ ಅರ್ಥಹೀನವಾಗುತ್ತವೆ (13:1-3). ಎರಡನೆಯದಾಗಿ, ಪೌಲನು ಪ್ರೀತಿಯು ಕ್ರೈಸ್ತ ಗುಣಲಕ್ಷಣದ ತಿರುಳಾಗಿದೆ ಎಂದು ವಾದಿಸುತ್ತಾನೆ. ಪ್ರೀತಿಯು ಕ್ರೈಸ್ತರು ಅನುಭವಿಸುವ ಖಚಿತವಾದ ಮಾರ್ಗವಲ್ಲ; ಅದು ಆತನು ಕಾರ್ಯಮಾಡುವ ವಿಧಾನವಾಗಿದೆ. ಕ್ರೈಸ್ತನು ತನ್ನ ಹೃದಯ ಮತ್ತು ಮನಸ್ಸಿನಲ್ಲಿರುವ ಭಾವನೆಗಳನ್ನು ದೇವರ ಮತ್ತು ಇತರರ ಸೇವೆಯನ್ನು ಮಾಡುವ ಮಾರ್ಗದಲ್ಲಿ ಬದಲಾಯಿಸಿಕೊಳ್ಳದೇ ಹೋದರೆ, ಅವರ ಭಾವನೆಗಳು ಕೇವಲ ಸ್ವಾರ್ಥ-ತೃಪ್ತಿಪಡಿಸುವವುಗಳಾಗಿರುತ್ತವೆ (13:4-7). ಮೂರನೆಯದಾಗಿ, ಪ್ರೀತಿ ಶಾಶ್ವತವಾದದ್ದು. ಅಸಾಮಾನ್ಯ ವರಗಳು ಕ್ರೈಸ್ತ ಯುಗದ ಮೊದಲನೆಯ ಭಾಗದಲ್ಲಿ ತಮ್ಮ ಉದ್ದೇಶವನ್ನು ನೇರವೇರಿಸಿದವುಗಳಾಗಿವೆ. ಪ್ರೀತಿ, ಇನ್ನೊಂದು ರೀತಿಯಲ್ಲಿ, ದೇವರ ಆಡಳಿತದಲ್ಲಿ ಶಾಶ್ವತವಾದ ಘಟಕವಾಗಿವೆ (13:8-13).

## ಮುಂದಿನ ಅಧ್ಯಯನಕ್ಕಾಗಿ: "ಪರಿಪೂರ್ಣವದದ್ದು ಯಾವದು"? (13:10)

ಪೌಲನು "ಪರಿಪೂರ್ಣವಾದದ್ದು" ಯಾವುದು ಎಂದು 13:10ರಲ್ಲಿ ವಿವರಿಸಲಿಲ್ಲ. ಪರಿಣಾಮವಾಗಿ, ವ್ಯಾಕ್ಯಾಂಗವನ್ನು ವಿವಿಧ ಮಾರ್ಗದಲ್ಲಿ ತಿಳಿದುಕೊಳ್ಳಲಾಗಿದೆ.

ಅರ್ಥೈಸುವವರು ಮೂರು ವಿವರಣೆಗಳ ಮೇಲೆ ಕೇಂದ್ರಿಕರಿಸುವ ಪ್ರವೃತ್ತಿಯನ್ನು ಹೊಂದಿದ್ದಾರೆ.

*ದೃಷ್ಟಿಕೋನ 1: ಪ್ರೀತಿಯ ಮೂಲಕ ಆತ್ಮೀಕ ಪ್ರಭುದ್ದತೆ.* ಕೆಲವರು ಪ್ರೀತಿ "ಪರಿಪೂರ್ಣತೆ" ಆಗಿದೆ ಎಂದು ವಾದಿಸುತ್ತಾರೆ ಯಾಕಂದರೆ ಪೌಲನು ಪ್ರೀತಿ ಬಿದ್ದು ಹೋಗುವಂಥದಲ್ಲ ಎಂದು ಗುರುತಿಸಿದ್ದಾನೆ, ಇದಕ್ಕೆ ವ್ಯತ್ಯಾಸವಾಗಿ, ಯಾವುದು ಬಿದ್ದುಹೋಗುತ್ತದೆ ಅಥವಾ ನಿಂತುಹೋಗುತ್ತದೆ ಎಂದರೆ ಅವು ಆತ್ಮನ ಆಶೀರ್ವಾದ ವರಗಳು. ಕ್ರೈಸ್ತರು ಪ್ರಭುದ್ದರಾಗುತ್ತಿರುವ ಹಾಗೆ, ವಿವೇಚನೆಯು ಹೋಗುತ್ತದೆ, ಅವನು ಪ್ರೀತಿಸುವ ತನ್ನ ಸಾಮಥ್ರ್ಯದಲ್ಲಿ ಬೆಳೆಯುತ್ತಾನೆ, ಮಹತ್ಕಾರ್ಯಗಳ್ನು ಮಾಡುವ ವರಗಳಿಗಾಗಿರುವ ಆತನ ಬಯಕೆ ಕಡಿಮೆಯಾಗುತ್ತದೆ. ಆದಿ ಶತಮನಾದ ಕ್ರೈಸ್ತರು ಪ್ರೀತಿಯ ಪರಿಪೂರ್ಣತೆಯಲ್ಲಿ ಬೆಳೆದರು, ಅವರಿಗೆ ಇನ್ನೆಂದಿಗೂ ಆತ್ಮನ ವರಗಳ ಅವಶ್ಯಕತೆಯಿರಲಿಲ್ಲ.

ವಚನ 11 ಪ್ರಭುದ್ದತೆಯ ಕುರಿತು ಮಾತಾಡುವದಿಲ್ಲ. ಅದು ಹೇಳುತ್ತದೆ, ಮನುಷ್ಯನ ಬಾಲ್ಯಾವಸ್ಥೆಯಿಂದ ಪ್ರಾಯಸ್ಥನಾಗುತ್ತಾನೆ, ಕ್ರೈಸ್ತರು ಆತ್ಮೀಕವಾಗಿ ಪ್ರಬುದ್ದರಾಗುತ್ತಾರೆ ಮತ್ತು ಕ್ರೈಸ್ತ ಅರಿಕೆಯೊಂದಿಗೆ ಆರಂಭದಲ್ಲಿ ಇಲದಲ ಭಾವನಾತ್ಮಕ ಅಂಶಗಳಿಂದಾಚೆಗೆ ಪ್ರಗತಿಯತ್ತ ನಡೆಯುತ್ತವೆ. ಆತ್ಮೀಕ ಪ್ರಭುದ್ದತೆ ಎಂದರೆ ಬಹುಶಃ ಸಂಗತಿಗಳನ್ನು ಬಿಟ್ಟುಬಿಡುವದು. ಮೊದಲನೆಯ ಶತಮಾನ ಈ ಕ್ರೈಸ್ತರಿಗೆ, ಇದು ಮಹತ್ಕಾರ್ಯಗಳನ್ನು ಮಾಡುವ ಬಲಕ್ಕಿಂತ ಪ್ರಾಮುಖ್ಯತೆಯಲ್ಲಿ ಕಡಿಮೆಯಾಗಿತ್ತು ಮತ್ತು ಪ್ರೀತಿಯಿಂದ ತುಂಬಿದ ಜೀವಿತಕ್ಕೆ ಹೆಚ್ಚಿನ ಆದ್ಯತೆ ಇತ್ತು. ಪ್ರಭುದದತೆ ಕ್ರಿಸ್ತನ ಕಲಿಸಿದ ನೈತಿಕ ನಡತೆಯನ್ನು ಅಪ್ಪಿಕೊಳ್ಳುವದು.

ಈ ವಿವರಣೆಯ ಬಲಹೀನತೆ ಯಾಕೆ ಆತ್ಮೀಕ ವರಗಳು ಕ್ರೈಸ್ತರಿಗೆ ಅವರು ಪ್ರಭುದ್ದರಾಗುತ್ತಿರುವ ಹಾಗೆ ಅಷ್ಟೋಂದು ಪ್ರಾಮುಖ್ಯವಾಗಿರುವದಿಲ್ಲ ಎಂಬದನ್ನು ನೋಡುವದು ಕಠಿಣವಾಗಿದೆ. ಒಬ್ಬನು ಪ್ರೀತಿಸುವ ಸಾಮಥ್ರ್ಯದಲ್ಲಿ ಬೆಳೆಯುವದು ವಾಣಿಗಳನ್ನಾಡುವದು ಅಥವಾ ಸ್ವಸ್ಥಪಡಿಸುವದು ಇವುಗಳ ವೈಶಿಷ್ಟತೆಯ ಕೊರತೆಯನ್ನು ಹೊಂದಿವೆ ಎಂದು ಏಕೆ ಆಳವಾದ ಸಲಹೆಯನ್ನು ನೀಡುತ್ತದೆ? ಆತ್ಮೀಕ ವರಗಳು ಮತ್ತು ಎರಡು ಸ್ಪರ್ಧಿಸಿದಂತೆ ಕಂಡುಬರದಿದ್ದಾಗ್ಯೂ, ಏಕೆ ಒಂದರ ಅಭಿವೃದ್ಧಿ ಇನ್ನೊಂದರ ಅವನತಿಗೆ ಕಾರಣ ಎಂಬುದು ಸ್ಪಷ್ಟವಾಗಿಲ್ಲ.

*ದೃಷ್ಟಿಕೋನ 2. ಪರಿಪೂರ್ಣವಾದ ಅನುಕ್ರಮಣಿಕೆ.* "ಪರಿಪೂರ್ಣ" ಎಂಬ ಪದದ ಎರಡನೆಯ ತಿಳುವಳಿಕೆ. ಹೆಚ್ಚಾಗಿ ಸಮುದಾಯ-ಕೇಂದ್ರಿಕೃತವಾಗಿದೆ. ಇದರ ಕೇಂದ್ರಿಕರಿಸುವಿಕೆ ಹೆಚ್ಚಾಗಿ ವ್ಯಕ್ತಿಯ ಮುನ್ನಡೆಯುತ್ತಿರುವ ಆತ್ಮೀಕ ಪ್ರಭುದ್ದತೆಯ ಮೇಲೆ ಇಲ್ಲ. ಕೊರಿಂಥ ಮತ್ತು ಎಲ್ಲಡೆ ಸಭೆಗಳ ಪ್ರಭುದ್ದತೆ ಇದ್ದಂತೆ. ಅದ್ಬುತವಾದ ಆಶೀರ್ವಾದಗಳು, ಸಂಪೂರ್ಣವಾಗಿ ಸುವಾರ್ತೆಯ ಸಂದೇಶದ ಸತ್ಯವನ್ನು ದೃಢಪಡಿಸುವದಕ್ಕಾಗಿ. ಯೇಸು ತಾನೆ ಹೇಳಿದ್ದು ಅದ್ಬುತಗಳನ್ನು ಮಾಡುವದು ದೇವರು ತನ್ನನ್ನು ಕಳುಹಿಸಿಕೊಟ್ಟಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗಿದೆ (ಯೋಹಾನ 5:36). ಆದಿ ಕ್ರೈಸ್ತರು ಮಿಷನರಿಗಳು ಯೇಸು ಸತ್ತುವರೊಳಗಿಂದ ಎದ್ದುಬಂದಿದ್ದಾನೆ ಎಂದು ಪ್ರಕಟಿಸಿದಾಗ, ಅವರು ಮಾಡುವ ಅದ್ಭುತಕಾರ್ಯಗಳು ಅವರು ಏನು ಹೇಳುತ್ತಾರೋ

ಅದಕ್ಕೆ ಬೆಲೆಯನ್ನು ತಂದವು (ರೋಮಾ 15:19; 2 ಕೊರಿಂಥ 12:12; ಗಲಾತ್ಯ 3:5; ಇಬ್ರಿಯ 2:4). ಸತ್ಯವೇದದ ಅನುಕ್ರಮಣ ಪಟ್ಟಿಯ ಅನುಪಸ್ಥಿತಿಯಲ್ಲಿ ಹೊಸ ವಿಶ್ವಾಸಿಗಳನ್ನು ಬಿಟ್ಟುಬರಲು, ಅದ್ಭುತಕಾರ್ಯಗಳು ಸುವಾರ್ತೆಯನ್ನು ಪ್ರಕಟಿಸಿದ ಮೊದಲ ಪ್ರಸಂಗಿಗಳ ಸತ್ಯದ ಮೇಲೆ ಅಧಿಕಾರವನ್ನು ನೀಡಿದವು.

ಒಮ್ಮೆ ಪವಿತ್ರಾತ್ಮನು ಸುವಾರ್ತೆ ಬರೆಯಲ್ಪಡುವದಕ್ಕೆ ಕಾರಣನಾದನೋ ಮತ್ತು ಹೊಸ ಒಡಂಬಡಿಕೆಯ ವೇದಭಾಗದ ಅನುಕ್ರಮಣಿಕೆ ಅದರ ಸ್ಥಳದಲ್ಲಿ ಸ್ಥಾಪಿಸಲ್ಪಟ್ಟಿತೋ, "ಪರಿಪೂರ್ಣತೆ" ಬಂತು. ವೇದವಾಕ್ಯದೊಂದಿಗೆ ಹೋಲಿಸುವಾಗ ಅದ್ಭುತವಾದ ಆಶೀರ್ವಾದಗಳು ಅವರು ಸುವಾರ್ತೆಗಾಗಿ ನೀಡುತ್ತಿರುವ ಸಾಕ್ಷಿಯ ಭಾಗವಾಗಿದ್ದವು. "ಪರಿಪೂರ್ಣತೆ"ಯ ವಿವರಣೆಯ ಬೆಂಬಲಿಗರು "ಪರಿಪೂರ್ಣ" ಈ ಪದವು ಪರಿಪೂರ್ಣವಾಗಿರುವ ವೇದವಾಕ್ಯವನ್ನು ಹೆಸರಿಸಲು ಸಮಂಜಸವಾದ ಪದವಾಗಿದೆ.[12] ಇದರೊಟ್ಟಿಗೆ, ಅವರು ಅನುಭವವನ್ನು ನಿವೇದಿಸುತ್ತಾರೆ. ಯಾರೊಬ್ಬರೂ ಯೇಸು ಮತ್ತು ಆತನ ಅಪೊಸ್ತಲರು ಮಹತ್ಕಾರ್ಯಗಳನ್ನು ಮಾಡಿದರು ಎಂಬ ವಿಷಯದಲ್ಲಿ ಸಂಶಯಪಡಲಿಲ್ಲ. ಅಧುನಿಕ ಸಭೆಯಲ್ಲಿ ಕೂಡ ಇದೇ ರೀತಿಯ ಮಹತ್ಕಾರ್ಯಗಳು ನಡೆಯಬಹುದು ಎಂಬುದರ ಕುರಿತು ಅನೇಕರು ಸಂಶಯ ವ್ಯಕ್ತಪಡಿಸುತ್ತಾರೆ.

ಈ ವಿವರಣೆಯು ಕ್ರೈಸ್ತರ ಧಾರ್ಮಿಕ ಸಂಗತಿಗಳ ಅಧಿಕಾರಿಗಳೊಂದಿಗೆ ಮಾಡುತ್ತಿರುವ ಹೋರಾಟದಿಂದ ಉದ್ಭವಿಸುತ್ತದೆ. ಅರ್ಥೈಸುವಿಕೆಯು ಸಭೆಯ ಸಿದ್ಧಾಂತದ ಮತ್ತು ಕ್ರೈಸ್ತ ಜೀವಿತದ ಅಧಿಕಾರದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಅದು ಇದಕ್ಕೆ ಉತ್ತರವನ್ನು 13:10ರಲ್ಲಿ ಕಂಡುಕೊಳ್ಳುತ್ತದೆ. ಒಂದುವೇಳೆ ಇಂದು ಪವಿತ್ರಾತ್ಮನು ಕ್ರೈಸ್ತರಿಗೆ ಅದ್ಭುತವಾದ ಜ್ಞಾನವನ್ನು, ಪ್ರವಾದನೆಯನ್ನು ಹೇಳುವ ಸಾಮಥ್ರ್ಯ ಅಥವಾ ವಾಣಿಗಳನ್ನಾಡುವ ವರವನ್ನು ಕೊಟ್ಟಿದ್ದರೆ, ವರಗಳನ್ನು ಹೊಂದಿರುವ ಈ ವ್ಯಕ್ತಿಗಳು ಹೇಳುವ ಸಂದೇಶವನ್ನು ದೇವರಿಂದ ಬಂದಿರುವ ಹೊಸ ಸಂದೇಶ ಎಂದು ಪರಿಗಣಿಸಬೇಕು. "ಪರಿಪೂರ್ಣತೆ" ಎಂದರೆ "ಭಾಗವಾಗಿರುವದನ್ನು" ಮುಕ್ತಾಯಮಾಡುವದು ಎಂದು ನಂಬುವದು ತರ್ಕಬದ್ಧವಾಗಿದೆ. ಹಾಗೂ, ಕೊರಿಂಥದವರು ಹೊಸ ಒಡಂಬಡಿಕೆಯ ಅನುಕ್ರಮಣಿಕೆ ಬರುವದು ಮತ್ತು ಅದು ಮಹತ್ಕಾರ್ಯಗಳು ನಿಂತು ಹೋಗುವದರೊಳಗೆ ಅದು ಪೂರ್ತಿಯಾಗಬೇಕು ಎಂಬುದರ ಕುರಿಡು ಅರಿವುಳ್ಳವಾರಾಗಿರಲಿಲ್ಲ; ಅದೇ ಪ್ರಕಾರ, ಪೌಲನು ಅವರೊಂದಿಗೆ ವೇದವಾಕ್ಯದ ಕುರಿತಾಗಿ ಮಾತನಾಡುತ್ತಿರಲಿಲ್ಲ ಎಂದು ತೋರಿಬರುತ್ತದೆ. ನಡೆಯುತ್ತಿರುವ ಅದ್ಭುತಕಾರ್ಯಗಳ ಸ್ವರೂಪ, ವಾಣಿಗಳನ್ನಾಡುವದು ಮತ್ತು ಇಂದು ಪ್ರವಾದಿಸುವದು ಎಲ್ಲಿಯೋ ಒಂದುಕಡೆ 1 ಕೊರಿಂಥ 13 ಹೊರತು ಪಡಿಸಿ ನೆಲೆಗೊಂಡಿದೆ. ಉದಾಹರಣೆಗೆ, ಅ.ಕೃ. 8:1-18 ಪ್ರಾರಂಭಮಡುವದಕ್ಕೆ ಉತ್ತಮವಾದ ವೇದಭಾಗವಾಗಿದೆ.

*ದೃಷ್ಟಿಕೋನ 3. ನಿತ್ಯ ಜೀವ.* "ಪರಿಪೂರ್ಣತೆಯ" ಮೂರನೆಯ ವಿವರಣೆ ಪೌಲನು ಬರಲಿಕ್ಕಿರುವ ಕಾಲದ ಪ್ರಾರಂಭವನ್ನು ಉಲ್ಲೇಖಿಸುತ್ತಿದ್ದಾನೆ ಎಂದು ಹೇಳುತ್ತದೆ. "ಪರಿಪೂರ್ಣ," ಅವರು ಹೇಳುತ್ತಾರೆ ದೇವರು ವಿಮೋಚನೆಯನ್ನು ಹೊಂದಿದವರಿಗೆ ದೇವರು ಮುಂದಿನ ಲೋಕದಲ್ಲಿ ಸಿದ್ಧಪಡಿಸಿದ ಜೀವಿತಕ್ಕಾಗಿ ಸಿದ್ದಪಡಿಸಿಕೊಳ್ಳುವದಾಗಿದೆ. ಈ ದೃಷ್ಟಿಕೋನದ ಪ್ರಾಕಾರ ಪರಲೋಕವು ಪೌಲನ ವಿಷಯವಾಗಿತ್ತು, ". . . ನಂತರ ನಾನು

ಸಂಪೂರ್ಣವಾಗಿ ತಿಳಿದುಕೊಳ್ಳುತ್ತೇನೆ . . ." (13:12). ಕರ್ತನು ತಿರುಗಿ ಬರುವದು, ನ್ಯಾಯತೀರಿಸುವದಕ್ಕಾಗಿ ಮತ್ತು ಆದಿ ಕ್ರೈಸ್ತರ ಮನಸ್ಸಿನಲ್ಲಿ ಉನ್ನತಸ್ಥಾನದಲ್ಲಿದ್ದ ನಿತ್ಯಜೀವ, ಹೊಸ ಒಡಂಬಡಿಕೆಯಲ್ಲಿ ಅನೇಕ ವೇದಭಾಗಗಳು ಇದನ್ನು ದೃಢಪಡಿಸುವದರಿಂದ. ಭಾಗಶಃ ಸಂಗತಿಗಳು, ಉದಾಹರಣೆಗೆ ಅದ್ಭುತಗಳ ವರಗಳು, ಅನಾವಶ್ಯಕವಾಗುತ್ತವೆ. ಇನ್ನೊಂದು ಕಡೆ ಪ್ರೀತಿ ಶಾಶ್ವತವಾದ ಆಯಾಮವನ್ನು ಹೊಂದಿರುತ್ತವೆ. ಕ್ರೈಸ್ತರಾಗಿ, ನಾವು ದೇವರ ಮೇಲೆ ನಮಗಿರುವ ಪ್ರೀತಿಯನ್ನು ಮತ್ತು ನಮ್ಮ ಸಹಭಾಂದವರೊಂದಿಗೆ ನಮಗಿರುವ ಪ್ರೀತಿಯನ್ನು ಕರ್ತನು ತಿರುಗಿ ಬರುವಾಗ ನಮ್ಮೊಂದಿಗೆ ತೆಗೆದುಕೊಂಡು ಹೋಗುತ್ತೇವೆ.

ಈ ಅಂತಿಮ ವಿವರಣೆಯು ಪೌಲನ ಎಚ್ಚರಿಕೆಯನ್ನು ತಿಳಿದುಕೊಳ್ಳಲು ಉತ್ತಮವಾದ ಮಾರ್ಗವಾಗಿದೆ. ಇದು ಅದ್ಭುತಕಾರ್ಯಗಳು ಕ್ರೈಸ್ತರಲ್ಲಿ ಕರ್ತನ ತಿರುಗಿ ಬರುವವರೆಗೆ ಮುಂದುವರೆಯಬೇಕೆಂದು ವಾದಿಸುವದಿಲ್ಲ. ಬದಲಾಗಿ, ಇದರ ಅರ್ಥ ಕರ್ತನು ತಿರುಗಿ ಬರುವಾಗ ಮತ್ತು ದೇವರ ಜನರು ತಮ್ಮ ನಿತ್ಯಜೀವವನ್ನು ಆತನೊಂದಿಗೆ ಪ್ರಾರಂಭಿಸುತ್ತಾರೆ, ಅದ್ಭುತಗಳಿಗೆ ಸ್ಥಳವಿರುವದಿಲ್ಲ. ಈ ಕಾರಾಣದಿಂದ, "ಅಪೂರ್ಣವಾದದ್ದು ಇಲ್ಲದಂತಾಗುವದು." ಪ್ರೀತಿ, ಇದಕ್ಕೆ ವ್ಯತ್ಯಾಸವಾಗಿ ಪ್ರೀತಿ, ಶಾಶ್ವತವಾಗಿದೆ. ಪ್ರೀತಿಯು ಪರಲೋಕ ಸಾಮ್ರಾಜ್ಯದಲ್ಲಿ ಸಹ ಅವಶ್ಯವಾಗಿದೆ.

*ಮುಕ್ತಾಯ:* ಈ ಪ್ರತಿಯೊಂದು ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ಪ್ರಶ್ನೆಯು ಉದ್ಭವಿಸುವಾಗ, "ಪರಿಪೂರ್ಣತೆ" "ಅಪೂರ್ಣ" ವಾಗಿರುವದರ ನೇರವೇರಿಕೆಯಾಗಿ ನಿಂತುಕೊಳ್ಳುವದು ಉತ್ತಮವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಉಪಯೋಗಿಸಿದ ಈ ಮೂರು ಉದಾಹರಣೆಗಳು ವಿವೇಚನೆಯುಳ್ಳವುಗಳಾಗಿವೆ. ಪೌಲನು ಅದ್ಭುತಗಳ ಪ್ರಕಟನೆಗಳನ್ನು ಉಪಯೋಗಿಸುತ್ತಾನೆ, ಬಾಲ್ಯಾವಸ್ಥೆಯ ನಮ್ಮ ಅಪ್ರಭುದ್ದತೆ ಮತ್ತು ಅಪೂರ್ಣ ಜ್ಞಾನ ಬಿದ್ದುಹೋಗುವ ಮತ್ತು ನಿಂತುಹೋಗುವ ಆ ಅಂಶಗಳಿಗೆ ಅವನ ಉದಾಹರಣೆಯಾಗಿದೆ. ಪ್ರೀತಿಯು ಶಾಶ್ವತವಾದ, ನಿರಂತರವಾದ ಮತ್ತು ನೆಲೆಗೊಳ್ಳುವ ಗುಣಲಕ್ಷಣವನ್ನು ಹೊಂದಿದೆ. ಅದ್ಭುತಗಳ ಪ್ರಕಟನೆಗಳು ನಿಂತುಹೋಗಬಹುದು (ಮತ್ತು ಇಂದು ಅವು ನಿಂತುಹೋಗಿವೆ). ಬಾಲ್ಯದ ಅಪ್ರಭುದ್ದತೆಯು ಪ್ರಾಯಸ್ಥರಾಗುವಾಗ ಕಳೆದುಹೋಗುತ್ತದೆ. ಅಪರಿಪೂರ್ಣವಾದ ನಮ್ಮ ಜ್ಞಾನ ಬಾಡಿಹೋಗಬಹುದು, ವಿಶೇಷವಾಗಿ ನಾವು ಪರಲೋಕಕ್ಕೆ ಸೇರುವಾಗ. ಇವುಗಳಿಗೆ ವ್ಯತ್ಯಾಸವಾಗಿ ನಿಂತುಕೊಳ್ಳುವದೇ ಪ್ರೀತಿಯ ಶಾಶ್ವತತೆ.

## ಅಳವಡಿಸಿಕೊಳ್ಳುವದು

### ಅದ್ಭುತಗಳು ಮತ್ತು ಇಂದು ಸಭೆ?

ಅಸಾಮಾನ್ಯವಾದ ಬರಗಳು ಪ್ರವಾದನೆ, ವಿಧ್ಯೆ, ವಾಣಿಗಳನ್ನಾಡುವದು ಸ್ವಸ್ಥತೆ ಮತ್ತು ಕಾಲವು ಮುಗಿದು ಹೋಗುವ ಪೂರ್ವದಲ್ಲಿ ಸಂಭವಿಸುವ ಅದ್ಭುತಕಾರ್ಯಗಳು ನಿಂತುಹೋಗುವದನ್ನು ಪೌಲನು ಕಲ್ಪಿಸಿದ್ದನೋ? ಶತಮಾನಗಳುದ್ದಕ್ಕೂ ಸಭೆಯಲ್ಲಿರುವ ಪುರುಷರು ಮತ್ತು ಸ್ತ್ರೀಯರು ತಮ್ಮ ಸ್ವಂತ ಸಂಕಲ್ಪದಿಂದ ಮಹತ್ಕಾರ್ಯಗಳನ್ನು

ಮಾಡುತ್ತಿದ್ದರೋ? ಇಂದು ಕ್ರೈಸ್ತರು ವೈದ್ಯಕೀಯ ಎಲ್ಲಾ ಪ್ರಯತ್ನಗಳು ವಿಫಲವಾಗುವಾಗ ಸ್ವಸ್ಥಪಡಿಸಬಲ್ಲರೋ? ಈ ಪ್ರಶ್ನೆಗಳು ಕೇವಲ ಶೈಕ್ಷಣಿಕವಲ್ಲ. ಅವು ಸಭೆಯ ಸ್ವರೂಪ, ಸಭೆಯ ಆರಾಧನೆ ಮತ್ತು ವೇದವಾಕ್ಯದ ಆಧಾರವನ್ನು ಅವಲಂಭಿಸಿವೆ.

ಈ ಪ್ರಶ್ನೆಗಳನ್ನು ಎಚ್ಚರಿಕೆಯಿಂದ ರಚಿಸುವದು ಮಹತ್ವವುಳ್ಳದ್ದಾಗಿದೆ. ಕ್ರೈಸ್ತರು ದೇವರು ಪ್ರಾರ್ಥನೆಗೆ ಉತ್ತರಿಸುತ್ತಾನೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಪ್ರಾರ್ಥನೆಗೆ ಆತನು ಉತ್ತರಿಸುವದು, ಯಾವುದು ಸಂಭವಿಸಲು ಅಸಾಧ್ಯವೋ ಅದನ್ನು ಸಾಧ್ಯವಾಗಿಸುವದಕ್ಕೆ ಆತನ ಮಧ್ಯಸ್ಥಿಕೆವಹಿಸುವದು ಇದರ ವ್ಯಾಖ್ಯಾನವಾಗಿದೆ. ನಂಬಿಕೆಯು ಪ್ರಾರ್ಥನೆ ಮಾಡುವದಕ್ಕೆ ಮಾತ್ರ ಅವಶ್ಯವಲ್ಲ, ಉತ್ತಮವಾದ ಉತ್ತರಗಳನ್ನು ಹೊಂದಿಕೊಳ್ಳುವದಕ್ಕೆ ಸಹ.

ಕೊರಿಂಥದಲ್ಲಿ ಅದ್ಭುತಗಳು ದೇವರು ಒದಗಿಸುವ ಉತ್ತರಗಳಿಂದಾಚೆಗೆ ಹೊರಟವು. ಪಟ್ಟಣದಲ್ಲಿ ಕೆಲವು ಕ್ರೈಸ್ತರು, ಆದ್ಭುತವಾದ ಆಶೀರ್ವಾದಗಳನ್ನು ಹೊಂದಿದವರು, ರೋಗಿಯನ್ನು ಸಂಧಿಸುತ್ತಿದ್ದರು, ಬಹುಶಃ ಮರಣದ ಹಾಸಿಗೆಯಲ್ಲಿ ಇರುವವನ್ನು ಸಹ ಮತ್ತು ವಾಕ್ಯದಿಂದ ಅವನನ್ನು ಸ್ವಸ್ಥಪಡಿಸುತ್ತಿದ್ದರು. ಪೌಲನು ಸಹ ಕೊರಿಂಥದಲ್ಲಿ ಮತ್ತು ಬೇರೆ ಕಡೆಗಳಲ್ಲಿ ಇಂಥಹ ಕಾರ್ಯಗಳನ್ನು ಮಾಡಿದ್ದನು, ಅವನು ಹೇಳುತ್ತಾನೆ, “ಹಿಂಸೆಯನ್ನು ಸ್ಥಿರಚಿತ್ತದಿಂದ ತಾಳಿಕೊಳ್ಳುವದರಲ್ಲಿಯೂ ಸೂಚಕಕಾರ್ಯಗಳನ್ನೂ ಅದ್ಭುತಗಳನ್ನೂ ಮಹತ್ಕಾರ್ಯಗಳನ್ನೂ ನಡಿಸಿದ್ದರಲ್ಲಿಯೂ ಅಪೊಸ್ತಲನಿಗೆ ಇರತಕ್ಕ ಲಕ್ಷಣಗಳು ನಿಮ್ಮ ಮಧ್ಯದಲ್ಲಿ ತೋರಿದವು” (2 ಕೊರಿಂಥ 12:12).

ವರ್ಷಗಳ ಹಿಂದ ಪೌಲನು ಕೊರಿಂಥಕ್ಕೆ ಬಂದಿದ್ದನು, ಪೇತ್ರ ಮತ್ತು ಯೋಹಾನರು ಯೆರೂಸಲೇಮಿನಲ್ಲಿ ಒಬ್ಬ ಕುಂಟನನ್ನು ಸಂಧಿಸಿದ್ದರು. ಪೇತ್ರ ಅವನನ್ನು ನೋಡಿ “ನಜರೇತಿನ ಯೇಸುವಿನ ಹೆಸರಿನಲ್ಲಿ ಎದ್ದು ನಡೆದಾಡು!” ಎಂದು ಹೇಳಿದನು (ಅ.ಕೃ. 3:6). ದಾಖಲೆಯು ಮುಂದುವರೆಸುತ್ತಾ, “ಆ ಕ್ಷಣವೇ ಅವನ ಕಾಲುಗಳಿಗೂ ಹರಡುಗಳಿಗೂ ಬಲಬಂತು; ಅವನು ಹಾರಿ ನಿಂತು ನಡೆದಾಡಿದನು” ಎಂದು ಬರೆಯುತ್ತಾನೆ (ಅ.ಕೃ. 3:8). ಅಪೋಸ್ತರು ಶಾಶ್ವತವಾಗಿ ಅಂಗವಿಕಲರಾಗಿರುವ ಈ ಕುಂಟನಂತ ಅಸಂಖ್ಯಾತ ಜನರನ್ನು ಸ್ವಸ್ಥಪಡಿಸಿರಬಹುದು. ಅಪೋಸ್ತಲರ ಕೃತ್ತಯಗಳು ಪವಿತ್ರಾತ್ಮನು ಪೇತ್ರನನ್ನು ಈ ಎಲ್ಲಾ ಜನರನ್ನು ಸ್ವಸ್ಥಪಡಿಸಲು ನಿರ್ದೇಶಿಸಿದನು ಎಂಬುದನ್ನು ಸೂಚಿಸುತ್ತದೆ. ಮಹತ್ಕಾರ್ಯಗಳು ಇಂದು ಸಭೆಯ ಜೀವಿತದ ಭಾಗವಾಗಿವೆ ಎಂದು ಹೇಳುವದಕ್ಕೆ ಮೊದಲನೆಯ ಶತಮಾನದಲ್ಲಿ ಆತ್ಮ ಆಶೀರ್ವಾದವನ್ನು ಹೊಂದಿದ ಜನರು ಮಾಡುತ್ತಿದ್ದ ಅದೇ ಅದ್ಭುತಗಳನ್ನು ಮಾಡುವ ವ್ಯಕ್ತಿಗಳು ಇಂದು ಸಹ ಇದ್ದಾರೆ ಎಂಬುದನ್ನು ದೃಢಪಡಿಸುವದಾಗಿದೆ. ಇದು ದೇವರು ಕ್ರೈಸ್ತರ ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ಒದಗಿಸುವ ಮಾರ್ಗದಲ್ಲಿ ಪ್ರತಿಕ್ರಿಯಿಸುತ್ತಾನೆ ಎಂಬ ಹೇಳಿಕೆಗೆ ಸಮನಾದದ್ದಲ್ಲ.

ಹೊಸ ಒಡಂಬಡಿಕೆಯಲ್ಲಿ ಅದ್ಭುತಗಳು ತಮ್ಮಲ್ಲಿಯೇ ಕೊನೆಯಲ್ಲ. ಅವು ದೃಶ್ಯವಾದ ಮತ್ತು ಅನುಭಾವಾತ್ಮಕ ಸಾಕ್ಷಿಯನ್ನು ಸತ್ಯದ ಕುರಿತು ನೀಡುತ್ತವೆ. ಪ್ರಾತಂಭದಲ್ಲಿ ಸುವಾರ್ತೆಯು ಗ್ರೀಕೋ ರೋಮನ್ ಲೋಕದಲ್ಲಿ ಹರಡಿದ ನಂತರ ಮತ್ತು ಹೊಸ ಒಡಂಬಡಿಕೆಯ ಅನುಕ್ರಮಣಿಕೆಯನ್ನು ಬರೆದು ಸ್ವೀಕರಿಸಿದ ನಂತರ ಅದ್ಭುತಗಳು ಅದೇ ಮಹತ್ವದ ಪಾತ್ರವನ್ನು ಇನ್ನೆಂದಿಗೂ ಹೊಂದಿಕೊಳ್ಳಲಿಲ್ಲ. ಹೊಸ ಒಡಂಬಡಿಕೆಯು ನಮಗೆ

ಬೋಧಿಸುತ್ತದೆ, ಮತ್ತು ಅಧುನಿಕ ಅನುಭವವಗಳು ದೃಡಿಸುತ್ತವೆ, ಆದಿ ಸಭೆಯಲ್ಲಿ ಪರಿಚಿತವಾಗಿರುವ ಅದ್ಭುತಗಳು ಅದರ ಮುನ್ನಡೆಯುತ್ತಿರುವ, ಶಾಶ್ವತವಾದ ಜೀವಿತದ ಭಾಗವಾಗಿಲ್ಲ. ವಯಕ್ತಿಕ ಕಥೆಗಳು ಮತ್ತರು ಸಾಕ್ಷಿಗಳಿಮದಾಚೆಗೆ, ಕ್ರೈಸ್ತರು ಆಧುನಿಕ ಲೋಕದಲ್ಲಿ ನೈಜ್ಯತೆಯನ್ನು ಎದುರಿಸಬೇಕಾಗುತ್ತದೆ. ಪೌಲನು, ಪೇತ್ರನು ಮತ್ತು ಯೇಸುವ ಮಾಡಿದ ಅದ್ಭುತಗಳಂತವುಗಳು ಇಂದು ಸಂಭವಿಸುತ್ತಿಲ್ಲ. ಅಸಾಮಾನ್ಯವಾದ ಅಥವಾ ಬೇರೆ ವಿಧಧ ನಿಯಮಗಳಿಗೆ "ಅದ್ಭುತಗಳು" ಎಂಬ ಪಟ್ಟಿಯನ್ನು ನೀಡಲಾಗುವದಿಲ್ಲ.

---

## ಟಿಪ್ಪಣಿಗಳು

[1]Maimonides (or "Rambam," an acronym for "Rabbeinu Moshe Ben Maimon") *Mishneh Torah*. [2]David E. Aune, *Prophecy in Early Christianity and the Ancient Mediterranean World* (Grand Rapids, Mich.: Wm. B. Eerdmans Publishing Co., 1983), 20–21. [3]ತನ್ನ ಬೋಧನೆಯನ್ನು ವಿವರಿಸಲು ಅಥವಾ ತನ್ನ ಪ್ರೋತ್ಸಾಹಕ್ಕೆ ಬಲವನ್ನು ನೀಡಲು ಪೌಲನು ತನ್ನ ಜೀವನವನ್ನು ಒಂದು ಉದಾಹರಣೆಯಾಗಿ ಬಳಸುತ್ತಾರೆಂದು Carl R. Holladay ಹೇಳಿದರು. (Carl R. Holladay, "1 Corinthians 13: Paul as Apostolic Paradigm," in *Greeks, Romans, and Christians: Essays in Honor of Abraham Malherbe*, ed. David L. Balch, Everett Ferguson, and Wayne A. Meeks [Minneapolis: Fortress Press, 1990], 98.) [4]Ignatius *Letter to the Ephesians* 4; *Letter to the Philadelphians* 1. [5]William Harris, "'Sounding Brass' and Hellenistic Technology," *Biblical Archaeology Review* 8 (January–February 1982): 38–41. [6]John Stott, *The Contemporary Christian* (Downers Grove, Ill.: Inter-Varsity Press, 1992), 148. [7]ಈ ಪದಗಳು, ಆದರೂ ವಿವಿಧ ರೂಪಗಳಲ್ಲಿದ್ದರೂ, ಎರಡೂ ಕ್ರಿಯಾಪದದಿಂದ (*kaiō*, "ದಹಿಸು") ಬಂದವು; ಅವರಿಗೆ ಅರ್ಥದಲ್ಲಿ ಗಮನಾರ್ಹವಾದ ವ್ಯತ್ಯಾಸವಿಲ್ಲ. [8]Henry Drummond, *The Greatest Thing in the World* (Westwood, N.J.: Fleming H. Revell Co., n.d.), 23–24. [9]D. A. Carson, *Showing the Spirit: A Theological Exposition of 1 Corinthians 12—14* (Grand Rapids, Mich.: Baker Book House, 1987), 61. [10]James D. G. Dunn, *The Theology of Paul the Apostle* (Grand Rapids, Mich.: Wm. B. Eerdmans Publishing Co., 1998), 675.

[11]The phrase ἐν αἰνίγματι (*en ainigmati*, "as a puzzle") appears only here in the New Testament. [12]In James 1:25 the same word for "perfect" (τέλειος, *teleios*) is used.